ನೋಡಿ ಹೇಳುತ್ತೇನೆ. ಇನ್ನು ಪರಿಹಾರದ ಬದಲಾಗಿ ಸಬ್ಸಿಡಿ ಹಣವಾಗಿ ಕೊಡುತ್ತಿದ್ದೇವೆ. ತಾವು ಹೇಳಿದಂತಹ ವಿಚಾರದಲ್ಲಿ ಸರಿಯಾದಂತಹ ವ್ಯವಸ್ಥೆಯನ್ನು ಮಾಡುವಂತಹ ವಿಚಾರದಲ್ಲಿ ಮಾನ್ಯ ಮುಖ್ಯಮಂತ್ರಿಗಳು ಮತ್ತು ಮಾನ್ಯ ಉಪ ಮುಖ್ಯಮಂತ್ರಿಗಳ ಜೊತೆ ಮಾತನಾಡಿ, ಅದರ ಬಗ್ಗೆ ಆಲೋಚನೆಯನ್ನು ಮಾಡುತ್ತೇವೆ.

ಅಧ್ಯಕ್ಷರು: ಈಗ Chief Minister ನಿಂದ ಉತ್ತರವನ್ನು ಕೊಡಿಸಿ ಬಿಡೋಣ. ಪಡಿತರ ಚೀಟಿಗೆ ಸಂಬಂಧಪಟ್ಟ ಹಾಗೆ ಮಲ್ಲಿಕಾರ್ಜುನ ಎಸ್. ಅಕ್ಕಿಯವರು ಕೊಟ್ಟಿದ್ದಾರೆ, ಹೇಳಿ.

(ಆ) ಪಡಿತರ ಚೀಟಿಗೆ ಸಂಬಂಧಪಟ್ಟ ಹಾಗೆ.

ಶ್ರೀ ಮಲ್ಲಿಕಾರ್ಜುನ ಎಸ್. ಅಕ್ಕಿ(ಕುಂದಗೋಳ): ಮಾನ್ಯ ಅಧ್ಯಕ್ಷರೆ, ಪಡಿತರ ಚೀಟಿ ಬಗ್ಗೆ ಹಲವಾರು ಬಾರಿ ಹಿರಿಯರು ಈ ಸದನದಲ್ಲಿ ಬೆಳಕನ್ನು ಚೆಲ್ಲಿದ್ದಾರೆ. ನಾನು ಹೋದ ಬಾರಿ ಇದರ ಬಗ್ಗೆ ಪ್ರಶ್ನೆಯನ್ನು ಕೇಳಿದ್ದು, ನೀವು ಅದನ್ನು ಅರ್ಧ ಗಂಟೆ ಕಾಲಾವಧಿ ಚರ್ಚೆಗೆ ಅವಕಾಶ ಮಾಡಿಕೊಟ್ಟಿದ್ದಕ್ಕೆ ತಮಗೆ ಧನ್ಯವಾದಗಳನ್ನು ಅರ್ಪಿಸುತ್ತೇನೆ. ಪಡಿತರ ಚೀಟಿ ಬಗ್ಗೆ ಹಲವಾರು ಬಾರಿ ಚರ್ಚೆಯನ್ನು ಮಾಡಿದ್ದೇವೆ. ಆದರೆ ಗ್ರಾಮೀಣ ಪ್ರದೇಶಗಳಲ್ಲಿ ಇನ್ನೂ ಪಡಿತರ ಚೀಟಿ ವ್ಯವಸ್ಥೆ ಸರಿಯಾಗಿ ಆಗಿಲ್ಲ. ಇವತ್ತು ನಾವು ಯಾವುದೇ ಒಂದು ಹಳ್ಳಿಗೆ ಸಭೆಗೆ ಹೋದರೆ ಅಲ್ಲಿರುವಂತಹ ಬಡವರು ಬಂದು ಪಡಿತರ ಚೀಟಿ ಬಗ್ಗೆ ಈಗಲೂ ಕೂಡ ಒತ್ತಾಯವನ್ನು ಮಾಡುತ್ತಿದ್ದಾರೆ. ಇವತ್ತು APL card ಮತ್ತು BPL card ಗಳನ್ನು ಯಾರಿಗೆ ಕೊಡಬೇಕು ಎನ್ನುವುದರ ಬಗ್ಗೆ ಒಂದು ಸಂಘವನ್ನು ಮಾಡಿದ್ದರು. ಇವತ್ತು ಸರಿಯಾಗಿ ಯಾದಿ/ಸರ್ವೇ ಮಾಡದೇ ಯಾರಿಗೆ BPL card ಕೊಡಬೇಕು ಅವರಿಗೆ APL card ಕೊಟ್ಟಿದ್ದಾರೆ. ಯಾರಿಗೆ ಅನ್ನಪೂರ್ಣ ಕಾರ್ಡ್‌ಗಳು ಹಾಗೂ ಅಂತ್ಯೋದಯ ಕಾರ್ಡುಗಳನ್ನು ಕೊಡಬೇಕು, ಅವರಿಗೆ ಕೊಡದೇ, ಯಾರಿಗೆ ಇವತ್ತು ಐದಾರು ಏಕರೆ ಜಮೀನು ಇದೆ, ಅವರಿಗೆ ಅಂತ್ಯೋದಯ ಕಾರ್ಡುಗಳನ್ನು ಕೊಡುವಂತಹ ಕೆಲಸವನ್ನು ಸೆಕ್ರೆಟರಿಗಳು ಮಾಡಿದ್ದಾರೆ. ನಾನು ಮಾನ್ಯ ಸಚಿವರಿಗೆ ಕೇಳುವುದೇನೆಂದರೆ, ಈ ಸಮಸ್ಯೆ ಬಗೆಹರಿಯಬೇಕಾದರೆ ಎಲ್ಲಾ ಜಿಲ್ಲೆಯ ಶಾಸಕರುಗಳನ್ನು ಕರೆದು ತಮ್ಮ ತಮ್ಮ ಕ್ಷೇತ್ರದಲ್ಲಿ ಯಾವ ರೀತಿಯಾಗಿ ಪಡಿತರ ಚೀಟಿ ವಿತರಣೆಯಾಗುತ್ತಿದೆ ಎನ್ನುವುದರ ಬಗ್ಗೆ ಒಂದು ಸಭೆಯನ್ನು ಮಾಡಬೇಕು. ಪಡಿತರ ಚೀಟಿಯ ಬಗ್ಗೆ ಹಲವಾರು ಮಾನ್ಯ ಸದಸ್ಯರುಗಳು ಮಾತನಾಡಿದರೂ ಕೂಡ ಅದರ ಸಮಸ್ಯೆ

ಬಗೆಹರಿಯದೇ ಹಳ್ಳಿಯಲ್ಲಿ ಇನ್ನೂ ಕೂಡ ಸಮಸ್ಯೆಗಳು ಮುಂದುವರೆದಿವೆ. ಇವತ್ತು ಕಡು ಬಡವರಿಗೆ ಅಕ್ಕಿ ಇರಬಹುದು, ಗೋಧಿ ಇರಬಹುದು, ಸರಿಯಾಗಿ ವಿತರಣೆಯಾಗಿಲ್ಲ. ಇವತ್ತು ಸರ್ಕಾರಗಳು ಹಲವಾರು ಯೋಜನೆಗಳನ್ನು ಕೊಡಬಹುದು. ಇವತ್ತು ಸರ್ಕಾರಕ್ಕೆ ಹೆಸರು, ಗೌರವ ಉಳಿಯಬೇಕಾದರೆ ಬಡವರಿಗೆ ಪಡಿತರ ಚೀಟಿಯಲ್ಲಿ ಕೊಡಬೇಕಾಗಿರುವಂತಹ ಅಕ್ಕಿ ಇರಬಹುದು, ಗೋಧಿ ಇರಬಹುದು ಅದನ್ನು ಸರಿಯಾಗಿ ಕೊಟ್ಟಿದ್ದಾದರೆ, ಈ ಸರ್ಕಾರಕ್ಕೆ ಇನ್ನೂ ಹೆಚ್ಚು ಹೆಸರು ಬರುತ್ತದೆ ಎಂದು ಹೇಳುತ್ತೇನೆ. ಈ ವಿಚಾರದ ಬಗ್ಗೆ ಹೋದ ಶಾಸನ ಸಭೆಯಲ್ಲಿ ಹಲವಾರು ಹಿರಿಯ ಸದಸ್ಯರು ಮಾತನಾಡಿದರೂ ಕೂಡ ಈ ಸಮಸ್ಯೆ ಗ್ರಾಮೀಣ ಪ್ರದೇಶದಲ್ಲಿ ಬಗೆಹರಿದಿಲ್ಲ. ಇವತ್ತು ನಾನು ಮಾನ್ಯ ಮಂತ್ರಿಗಳಿಗೆ ಮನವಿ ಮಾಡಿಕೊಳ್ಳುತ್ತೇನೆ, ಆ ಜಿಲ್ಲೆಯ ಎಲ್ಲಾ ಶಾಸಕರುಗಳ ಸಭೆಯನ್ನು ಕರೆದು, DC ಹಾಗೂ food ಗೆ ಸಂಬಂಧಪಟ್ಟ ಅಧಿಕಾರಿಗಳನ್ನು ಕರೆದು ಯಾವ ರೀತಿಯಾಗಿ ಪಡಿತರ ಚೀಟಿ ವಿತರಣೆಯಾಗಬೇಕು ಎಂದು ಮಾಡಬೇಕು. ಇದರ ವಿಚಾರದಲ್ಲಿ 75% ಕಡಿತ ಮಾಡಬೇಕೆಂದು ಅಧಿಕಾರಿಗಳು ಒಂದು ಹೇಳಿಕೆ ಕೊಟ್ಟರೆ, ಮಾನ್ಯ ಮಂತ್ರಿಗಳು ಒಂದು ಹೇಳಿಕೆಯನ್ನು ಕೊಡುತ್ತಾರೆ. ಈ ರೀತಿಯಾಗಿ ಪಡಿತರ ಚೀಟಿ ವಿಚಾರದಲ್ಲಿ ಗೊಂದಲಮಯವಾಗಿರುವಂತಹ ಸಂದರ್ಭದಲ್ಲಿ ಗ್ರಾಮೀಣ ಪ್ರದೇಶದಲ್ಲಿ ಮತ್ತು ಪಟ್ಟಣ ಪ್ರದೇಶದಲ್ಲಿ ಇರುವಂತಹ ಬಡವರಿಗೆ ಪಡಿತರ ಚೀಟಿಯನ್ನು ಸರಿಯಾಗಿ ಮುಟ್ಟಿಸುವಂತಹ ಕೆಲಸವನ್ನು ಮಾಡಬೇಕಾಗಿದೆ. ಇವತ್ತು ಅಂತ್ಯೋದಯ ಮತ್ತು ಅನ್ನಪೂರ್ಣ ಕಾರ್ಡುಗಳು ನಿರ್ಗತಿಕರಿಗೆ ಮಾತ್ರ ಕೊಡುವಂತಹ ಕಾರ್ಡುಗಳಾಗಿದ್ದು, ಇವತ್ತು ಎಂಟು ಎಕರೆ ಇದ್ದವರಿಗೂ ಕೂಡ ಆ ಕಾರ್ಡ್‌ನ್ನು ಕೊಟ್ಟಂತಹ ಉದಾಹರಣೆಯನ್ನು ನೋಡಿದ್ದೇವೆ. ಆದುದರಿಂದ ಅದರ ಬಗ್ಗೆ ಸಂಪೂರ್ಣವಾದ ತನಿಖೆಯನ್ನು ಮಾಡಿ ಯಾರಿಗೆ ನಿಜವಾಗಿ ಕಾರ್ಡುಗಳು ಸಿಗಬೇಕಾಗಿದೆ, ಅವರಿಗೆ ಕಾರ್ಡುಗಳನ್ನು ಕೊಡಿಸುವಂತಹ ಪ್ರಾಮಾಣಿಕವಾದಂತಹ ಪ್ರಯತ್ನವನ್ನು ಮಾನ್ಯ ಮಂತ್ರಿಗಳು ಮಾಡಬೇಕೆಂದು ತಮ್ಮ ಮುಖಾಂತರ ಕೇಳಿಕೊಳ್ಳುತ್ತೇನೆ.

ಶ್ರೀ ಜೆ.ಸಿ.ಮಾಧುಸ್ವಾಮಿ: ಮಾನ್ಯ ಅಧ್ಯಕ್ಷರೆ, ಇವತ್ತು ಪಡಿತರ ಚೀಟಿಯಲ್ಲಿ ಬಹಳ ಗೊಂದಲ ನಿರ್ಮಾಣವಾಗಿದೆ. ಇವತ್ತು ತಾವು 10 ರಿಂದ 12 circulars ಅನ್ನು ಕಳುಹಿಸಿದಿರಿ. ಆದರೆ ಯಾವುದೇ ವಿಷಯ ಇತ್ಯರ್ಥವಾಗಲಿಲ್ಲ. ಮೊದಲು 14 ಪಾಯಿಂಟ್ ಎಂದು ಕಳುಹಿಸಿದಿರಿ. ಅದರಲ್ಲಿ

ಯಾವ್ಯಾವ ರೀತಿ ಸರ್ವೇ ಮಾಡಬೇಕು? Bore ಇರಬೇಕಾ? Motor cycle ಇರಬೇಕಾ? ಎಂದು ಇತ್ತು. ತಾಲ್ಲೂಕು ಆಫೀಸ್‌ನಲ್ಲಿ ಒಂದೇ ಕೆಲಸ ಮಾಡಿರುವುದು ಏನೆಂದರೆ ತಪಶೀಲು, ಪರಿಶೀಲನೆ. ಈಗ latest ಆಗಿ, ನಿಮ್ಮ discretionಗೆ ಬಿಟ್ಟುಬಿಡುತ್ತೇವೆ, ನೀವೇ ಅಲ್ಲಿ ಕುಳಿತುಕೊಂಡು ಆಯ್ಕೆ ಮಾಡಿ ಎಂದು ಒಂದು ಕಾಗದ ಕೊಟ್ಟಿದ್ದಾರೆ. ಆದರೆ ಜಿಲ್ಲೆಯಲ್ಲಿ ಪ್ರತಿ ಶತ ಇಷ್ಟಕ್ಕಿಂತ ಹೆಚ್ಚು ಕಾರ್ಡು ಮಾಡಬಾರದು ಎಂದು ಒಂದು rider clause ಅನ್ನು ತಾವು ಹಾಕಿದ್ದೀರಿ. ಅದನ್ನು ಹಾಕಬೇಕಾದರೆ ನೀವು ಯಾವ ಆಧಾರದ ಮೇಲೆ ಹಾಕಿದ್ದೀರೆಂದು ಹೇಳಲಿಲ್ಲ. ಒಂದು ಜಿಲ್ಲೆಗೆ 75% ಎಂದು ಹೇಳುತ್ತೀರಿ. ಇನ್ನೊಂದು ಜಿಲ್ಲೆಗೆ 60% ಎಂದು ಹೇಳುತ್ತೀರಿ. ನೀರಾವರಿ ಇರುವಂತಹ ಜಾಗಕ್ಕೆ 100% ಮಾಡುತ್ತೀರಿ. ನಮ್ಮಂತಹ ಬಯಲುಸೀಮೆ ಪ್ರದೇಶಕ್ಕೆ 65 ರಿಂದ 66% ಇಡಬೇಕೆಂದು ಹೇಳಿ ಕುತ್ತಿಗೆ ಹಿಡಿದುಕೊಂಡು ಬಿಟ್ಟಿದ್ದಾರೆ. ಇವತ್ತು ಯಾವೊಂದು ಬಡವರಿಗೆ ಕಾರ್ಡ್‌ನ್ನು ಕೊಡುವುದಕ್ಕಾಗುತ್ತಿಲ್ಲ. ನಮ್ಮ ಕ್ಷೇತ್ರದಲ್ಲಿ 18 ರಿಂದ 20 ಸಾವಿರ ಜನ ಕಾರ್ಡು ಬೇಕೆಂದು ಅರ್ಜಿ ಹಾಕಿದ್ದಾರೆ, ಅವರಿಗೆ ನಾವು ಕಾರ್ಡು ಕೊಡುವುದಕ್ಕಾಗುತ್ತಿಲ್ಲ. ನಮಗೆ reduce ಮಾಡಿ ಎಂದು ಹೇಳಿ ಇವರು ಕಳುಹಿಸುತ್ತಿದ್ದಾರೆ. ನಾವು 72% ಕೊಟ್ಟಿದಂತಹ ತಾಲ್ಲೂಕುಗಳಿಗೆ average 70% ಇರಬೇಕಾದಂತಹ ಜಿಲ್ಲೆಗೆ 65%, 60% ತನ್ನಿ ಎಂದು ಆದೇಶ ಮಾಡಿ ಆ ಕಾರ್ಡುಗಳನ್ನು ಇವತ್ತಿನವರೆಗೂ ವ್ಯಾಪಕವಾಗಿ ಹಂಚುವುದಕ್ಕೆ ಆಗಿಲ್ಲ. ಇವತ್ತು ರೇಷನ್ ಕೊಡುವುದಕ್ಕೆ ಹಳ್ಳಿಗಳಲ್ಲಿ ಜನ ಬಿಡುತ್ತಿಲ್ಲ. ಏಕೆಂದರೆ ಏಕೆಗಲಾಟೆ ಮಾಡಿಕೊಳ್ಳುವುದೆಂದು ಹೇಳಿ ಬರುತ್ತಿದ್ದಂತಹ ರೇಷನ್ ಅನ್ನು ನಾವು ಎಂಟು ಕೆಜಿ, 12 ಕೆಜಿ ಎಂದು ಹಂಚಿಕೊಂಡು ಬಂದುಬಿಟ್ಟಿದ್ದೇವೆ. ನೀವು norms ಪ್ರಕಾರ ಈಗ unit fix ಮಾಡಿದಿರಿ, ಆ ಪ್ರಕಾರ ಕೊಡುವುದಕ್ಕೆ ಹೋದಾಗ ತಲಾ 4 ಕೆಜಿಯಂತೆ maximum 21 ಕೆಜಿಯಂತೆ ಎಂದು ಏನು ಮಾಡಿದಿರಿ, ಆ ರೀತಿ ಕೊಡುವುದಕ್ಕೆ ಹೋದರೆ ಒಂದೊಂದು ಗ್ರಾಮದಲ್ಲಿ 30 ರಿಂದ 40% ಜನರಿಗೆ ರೇಷನ್ ಸಿಗುತ್ತಿಲ್ಲ. ಇನ್ನು ಕೇಸರಿ ಕಾರ್ಡಿಗೆ kerosene ಬಿಟ್ಟು ನೀವು ಏನನ್ನೂ ಕೊಡುವುದಿಲ್ಲ. ಈ ರೀತಿ ಆಗುತ್ತಿರುವುದರಿಂದ ಕ್ಷೋಭೆ ಪ್ರಾರಂಭವಾಗುತ್ತದೆ. ಸೊಸೈಟಿಗಳು ರೇಷನ್ ಹಂಚುವುದಕ್ಕೆ ಆಗುತ್ತಿಲ್ಲ. ತಾವೇನಾದರೂ ಒಂದು ಸ್ಪಷ್ಟವಾದ ನಿರ್ಧಾರಕ್ಕೆ ಬರಬೇಕು. ಇಷ್ಟು ಪರ್ಸೆಂಟ್ ಇರಲಿ, ಅಷ್ಟು ಪರ್ಸೆಂಟ್ ಇರಲಿ ಎಂದು ಹೇಳುವುದನ್ನು ತೆಗೆಯಬೇಕು. ಬಡವ ಎಂದರೆ ಯಾರು ಎಂದು ಗುರುತಿಸುವುದಕ್ಕೆ ಇನ್ನೊಂದು ಮಾನದಂಡವನ್ನು ಅನುಸರಿಸಿ, ಹೊಸದಾಗಿ ಕಾರ್ಡನ್ನು ಕೊಡಬೇಕು. ಅಲ್ಲಿಯವರೆಗೂ

ಮಾಮೂಲಿಯಾಗಿ ರೇಷನ್ ಕೊಡುತ್ತಿರುವವರಿಗೆ ವ್ಯವಸ್ಥೆಯನ್ನು ಮಾಡಬೇಕು. ತಾವು ಒಂದೊಂದು ಜಿಲ್ಲೆಗೆ ಒಂದೊಂದು ಆಧಾರವನ್ನು ಇಟ್ಟುಕೊಂಡು ನಿಗದಿ ಮಾಡಿದ್ದೀರಿ. ಅದನ್ನು ತಾವು ಈ ಸಭೆಯ ಮುಂದೆ ಹೇಳಬೇಕು. ಯಾವ್ಯಾವ ಜಿಲ್ಲೆಗೆ 65% ಏಕೆ? 70% ಏಕೆ? 100% ಏಕೆ? ಅದು dry land, backward ಪ್ರದೇಶನಾ, irrigated land? ಇವುಗಳಿಗೆ ಏನಾದರೂ ಒಂದು ಮಾನದಂಡವನ್ನು ಇಟ್ಟುಕೊಂಡು ಮಾಡಬೇಕು. ಇಲ್ಲಿ ಶಕ್ತಿ ಇರುವವರಿಗೆ ಎಷ್ಟು ಬೇಕಾದರೂ ಕೊಡಬಹುದೆಂಬ ಸ್ಥಿತಿ ಬಂದಿದೆ. ಜಿಲ್ಲಾಧಿಕಾರಿಗಳು ದಿವಸ ಬೆಳಿಗ್ಗೆ ತಹಶೀಲ್ದಾರರಿಗೆ ಗಲಾಟೆಯನ್ನು ಮಾಡುವುದು. ಇವರು ಒಬ್ಬರು ಇದಕ್ಕೆ ಬಂದು ಸಿಕ್ಕಿ ಹಾಕಿಕೊಂಡಿದ್ದಾರೆ. ಒಂದು ಟೌನ್‌ಗೆ ಎಂದು ತಹಶೀಲ್ದಾರರನ್ನು ಇಟ್ಟಿದ್ದೀರಿ, ಇನ್ನೊಂದು ಕಡೆ ಹಳ್ಳಿಗಳಿಗೆಂದು EO ಗಳನ್ನು ಇಡುತ್ತಿದ್ದೀರಿ. ಈ ಗೊಂದಲದ ಮಧ್ಯೆ ರೇಷನ್ ಅನ್ನು ಹಂಚುವುದಕ್ಕೆ ಆಗುತ್ತಾ ಇಲ್ಲ. ತಾವು ಏನಾದರೂ ಒಂದು ಸ್ಪಷ್ಟ ತೀರ್ಮಾನಕ್ಕೆ ಬರಬೇಕು, ಮಾನ್ಯ ಗೋವಿಂದ ಕಾರಜೋಳರವರು ಒಳ್ಳೆ ಕೆಲಸ ಮಾಡುವ ಮಂತ್ರಿಗಳೆಂದು ನಾವು ಅನೇಕ ಸಲ ಈ ಸಭೆಯಲ್ಲಿ ಮಾತನಾಡಿದ್ದೇವೆ. ಈ ಗೊಂದಲವನ್ನು ತಕ್ಷಣ ನಿವಾರಣೆ ಮಾಡಬೇಕೆಂದರೆ, ಏನಾದರೂ ಒಂದು rational ಅನ್ನು ಸರ್ಕಾರ adopt ಮಾಡಿಕೊಳ್ಳಬೇಕು. ನೀವು ಬಡವರನ್ನು ಐಡೆಂಟಿಫೈ ಮಾಡಿ ಕೊಡಿ ಎಂದು ಏನು ಹೇಳಿದ್ದೀರಿ. ಅಲ್ಲಿಗೆ ನೀವು ನಿಲ್ಲಿಸಿ ಬಿಡಿ. ಅದು 65 ರೊಳಗೆ ಇರಿ, 70 ರೊಳಗೆ ಇರಿ, 75 ರೊಳಗೆ ಇರಿ, 80 ರೊಳಗೆ ಇರಿ ಎಂದು ಏನು condition ಹಾಕಿದ್ದೀರಿ. ಆ ನಿಬಂಧನೆಯನ್ನು ತೆಗೆದುಹಾಕಿದ್ದೀರಿ, ಏನಾದರೂ ನಾವು ಕೊಡಬಹುದು. ಇನ್ನು ಕೇಸರಿಕಾರ್ಡ್‌ನವರಿಗೂ 5 ಕೆ.ಜಿ, 6 ಕೆ.ಜಿ, ಅಕ್ಕಿಯನ್ನು ಕೊಡುವಂಥ ಸ್ಥಿತಿಯನ್ನು ನೀವು ತರಬೇಕು. ಒಂದು ಕಡೆ 3 ರೂಪಾಯಿಗಳಿಗೆ ಕೊಡುತ್ತೀರಿ. ಇನ್ನೊಂದು ಕಡೆ ಕೊಡುವುದೇ ಇಲ್ಲವೆಂದು ಹೇಳುತ್ತೀರಿ. ಹಾಗಾಗಿ ಊರುಗಳಲ್ಲಿ ಕ್ಷೋಭೆಯಾಗಿದೆ. ಆ ಬಗ್ಗೆ ತಾವು ತಕ್ಷಣ ತೀರ್ಮಾನವನ್ನು ತೆಗೆದುಕೊಂಡು ಉತ್ತರವನ್ನು ಹೇಳಬೆಕು.

ಶ್ರೀ ಕೆ.ಜಯಪ್ರಕಾಶ್ ಹೆಗ್ಡೆ (ಬ್ರಹ್ಮಾವರ): ಮಾನ್ಯ ಅಧ್ಯಕ್ಷರೆ, ನಮ್ಮಲ್ಲಿ ಯಾರಿಗೆ ಅರ್ಹತೆ ಇದೆ. ಅವರಿಗೆ ಕಾರ್ಡ್ ಸಿಕ್ಕಿಲ್ಲ, ಯಾರಿಗೆ ಅರ್ಹತೆ ಇಲ್ಲ, ಅವರಿಗೆ ಬಿಪಿಎಲ್ ಕಾರ್ಡ್ ಸಿಕ್ಕಿದೆ. ನಿಮಗೆ ನಾನು ನಮ್ಮ ಹಳ್ಳಿಯಲ್ಲಿ ಇಂಥಾ ವ್ಯವಸ್ಥೆಯಾಗಿರುವುದನ್ನು ತೋರಿಸುತ್ತೇನೆ. ಇನ್ನು ಪಂಚಾಯತ್‌ನವರ ಹತ್ತಿರ, ಮುನಿಸಿಪಾಲಿಟಿಯವರ ಹತ್ತಿರ, ಟೌನ್ ಪಂಚಾಯತ್‌ನವರ ಹತ್ತಿರ ನೀವು ಸರ್ವೆ

ಮಾಡಿಸಿಬಿಟ್ಟು, ಕಾರ್ಡ್ ಅನ್ನು ನಮ್ಮ ಆಹಾರ ಇಲಾಖೆಯವರಿಗೆ ಕೊಟ್ಟು ಬಿಟ್ಟು, ಇಲ್ಲಿ ಪಂಚಾಯತ್‌ನವರಿಗೆ ಮತ್ತು ಮುನಿಸಿಪಾಲಿಟಿಯವರಿಗೆ ಜನರು ಬೈಯುತ್ತಿದ್ದಾರೆ. ನಮಗೆ ಕಾರ್ಡ್‌ಗಳನ್ನು ಕೊಟ್ಟಿಲ್ಲವೆಂದು ಮೆಂಬರುಗಳಿಗೆ ಬೈಯುತ್ತಿದ್ದಾರೆ. ಈ ತಪ್ಪನ್ನು ಸರಿಪಡಿಸಬೇಕು, ಇಲ್ಲಿ ಅವರು ಸುಮ್ಮನೆ ಬೈಸಿಕೊಳ್ಳುವುದು. ಆಹಾರ ಇಲಾಖೆಯವರು ಅನ್ಯಾಯ ಮಾಡುವಂಥಾದ್ದು ಆಗಬಾರದು. ದಯವಿಟ್ಟು ಇದರ ಬಗ್ಗೆ ಪುನರ್ ಪರಿಶೀಲನೆ ಮಾಡಿ, ಯಾರಿಗೆ ಹಿಂದೆ BPL ಕಾರ್ಡ್ ಇತ್ತೋ ಅವರಿಗೆ ಕೊಡುವಂಥ ವ್ಯವಸ್ಥೆ ಆಗಲಿ, ನಂತರ ನೀವು ಪುನರ್ ಸರ್ವೆ ಮಾಡಿಸಿ, ಇದನ್ನು ಸರಿಪಡಿಸುವಂಥಾದ್ದು ಆಗಬೇಕೆಂದು ನಾನು ಕೇಳುತ್ತೇನೆ.

ಶ್ರೀ ಹೆಚ್.ಡಿ.ಬಸವರಾಜು: (ವಿರಾಜಪೇಟೆ) ಮಾನ್ಯ ಅಧ್ಯಕ್ಷರೆ, ಒಂದೇ ಒಂದು ನಿಮಿಷ, ಸೀಮೆಎಣ್ಣೆ ವಿಚಾರವನ್ನು ಹೇಳಿಬಿಡುತ್ತೇನೆ.

ಅಧ್ಯಕ್ಷರು: ಈಗ ಇನ್ನೂ ಅರ್ಧ ಗಂಟೆ ಕಾಲ ಚರ್ಚೆ, ಮತ್ತು ಗಮನ ಸೆಳೆಯುವ ಸೂಚನೆ ಇದೆ. ಮಾನ್ಯ ಮುಖ್ಯಮಂತ್ರಿಗಳು ಉತ್ತರವನ್ನು ಕೊಡಬೇಕು.

ಶ್ರೀ ಹೆಚ್.ಡಿ.ಬಸವರಾಜು: ಮಾನ್ಯ ಅಧ್ಯಕ್ಷರೆ, ಕೊಡಗು ಜಿಲ್ಲೆಯಲ್ಲಿ ಸೀಮೆಎಣ್ಣೆಯ ವಿಚಾರದಲ್ಲಿ ಏನಗಿದೆಯೆಂದರೆ, ಕೆಲವರು ಗ್ಯಾಸ್ ಫೆಸಿಲಿಟಿಯನ್ನು ಯಾರ್‍ಯಾರು ಪಡೆದುಕೊಂಡಿದ್ದಾರೆ. ಅವರಿಗೆ ಸೀಮೆಎಣ್ಣೆಯನ್ನು ಕೊಡುವಂಥಾ ವ್ಯವಸ್ಥೆಯನ್ನು ನಿಲ್ಲಿಸಿ ಬಿಟ್ಟಿದ್ದಾರೆ. ತಮಗೆ ಗೊತ್ತಿದೆ. ಅಲ್ಲಿ ಮಳೆಗಾಲದಲ್ಲಿ ಸಂಪೂರ್ಣ ವಿದ್ಯುತ್ ಸಂಪರ್ಕ ನಿಂತು ಹೋಗುತ್ತದೆ. ನೀವು ಯಾರಿಗೆ ಗ್ಯಾಸನ್ನು ಕೊಡುತ್ತಿದ್ದಿರೋ, ಅವರಿಗೆ ಯಾವುದೇ ರೀತಿಯಲ್ಲಿ ಸೀಮೆಎಣ್ಣೆಯನ್ನು ಕೊಡದೇ ಇರುವುದರಿಂದ, ಅವರ ಪರಿಸ್ಥತಿ ತುಂಬಾ ಕೆಟ್ಟ ಸ್ಥಿತಿಯಲ್ಲಿದೆ. ಆದುದರಿಂದ ನಾನು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತಿದ್ದೇನೆ. ಮಾನ್ಯ ಮಂತ್ರಿಯವರು ಕೊಡಗು ಜಿಲ್ಲೆಯಲ್ಲಿ ಯಾರ್‍ಯಾರಿಗೆ ಗ್ಯಾಸನ್ನು ಕೊಡುತ್ತಿದ್ದಿರೋ, ಮಳೆಗಾಲದಲ್ಲಾದರೂ ಅವರಿಗೂ ಸೀಮೆಎಣ್ಣೆಯನ್ನು ಕೊಡುವಂಥಾದ್ದು ಆಗಬೇಕು. ಬೇರೆ ಯಾವ ಸಂದರ್ಭದಲ್ಲೂ ನಾನು ನಿಮ್ಮನ್ನು ಒತ್ತಾಯ ಮಾಡುವುದಿಲ್ಲ. ಈ ಮಳೆಗಾಲದಲ್ಲಾದರೂ ಅವರಿಗೂ ಸೀಮೆಎಣ್ಣೆಯನ್ನು ಸರಬರಾಜು ಮಾಡುವಂಥಾ ವ್ಯವಸ್ಥೆಯನ್ನು ತಾವು ತರಬೇಕೆಂದು ನಾನು ಕೇಳಿಕೊಳ್ಳುತ್ತಿದ್ದೇನೆ. ಇನ್ನು ಕಾಫಿ ತೋಟಗಳಲ್ಲಿ ಕೃಷಿ ಕಾರ್ಮಿಕರು ಇದ್ದಾರಲ್ಲಾ, ಅವರಿಗೆ ಅಕ್ಕಿ ವಿತರಣೆ ಮಾಡುವುದನ್ನು ನಿಲ್ಲಿಸಿಬಿಟ್ಟಿದ್ದಾರೆ. ಈ ಹಿಂದೆ ಸರ್ಕಾರ ಒಂದು ತೀರ್ಮಾನವನ್ನು ತೆಗೆದುಕೊಂಡಿತ್ತು. ಕೃಷಿ ಕಾರ್ಮಿಕರನ್ನು ಕೂಡ ಕಾಫಿ

ತೋಟಗಳಲ್ಲಿ ಕೃಷಿ ಕೆಲಸ ಮಾಡುವಂಥಾ ಕಾರ್ಮಿಕರಿಗೂ ಕೂಡ BPL card ಅನ್ನು ಕೊಡಬೇಕು. ಅವರಿಗೆ ಈ ಪಡಿತರ ವ್ಯವಸ್ಥೆಯಲ್ಲಿ ಎಲ್ಲಾ ಸೌಲಭ್ಯಗಳು ಸಿಗಬೇಕೆಂದು ಇದೆ. ಅದು ತಮ್ಮ ಕಾಲದಲ್ಲಾದರೂ ಆ ಒಂದು ವ್ಯವಸ್ಥೆ ಸರಿಯಾದ ರೀತಿಯಲ್ಲಿ ಸಮರ್ಪಕವಾಗಿ ಅವರಿಗೂ ಸಿಗುವಂಥಾದ್ದು ಆಗಬೇಕೆಂದು ನನ್ನ ಕಳಕಳಿ.

ಶ್ರೀ ಜಿ.ಎಸ್.ಗಡ್ಡದೇವರಮಠ (ಶಿರಹಟ್ಟಿ): ಮಾನ್ಯ ಅಧ್ಯಕ್ಷರೆ, ಸರ್ವೇ ಮಾಡುವಂಥಾ ಕೆಲಸದಲ್ಲಿ ಆದಂಥಾ ಅಸ್ತವ್ಯಸ್ಥವೆಂದರೆ, ಈಗ ಆಹಾರ ಇಲಾಖೆಯ ಅಧಿಕಾರಿಗಳಾಗಲಿ, ಕಂದಾಯ ಇಲಾಖೆಯ ಅಧಿಕಾರಿಗಳಾಗಲಿ, ಇಬ್ಬರೂ ಸರ್ಕಾರ ಎಷ್ಟು ಬಾರಿ ಸರ್ವೇ ಕಾರ್ಯ ಮಾಡುವುದಕ್ಕೆ ಆದೇಶವನ್ನು ಮಾಡುತ್ತದೆ. ಆ ಎರಡೂ ಇಲಾಖೆಯ ಅಧಿಕಾರಿಗಳು ಈ ಸರ್ವೆ ಕೆಲಸವನ್ನು ಮಾಡಿಲ್ಲ. ಅಲ್ಲಿ ಮಾಡುತ್ತಿರುವಂಥವರು Ration distributors ಏನು ಇದ್ದಾರೆ, ಈ ಎರಡೂ ಇಲಾಖೆಯವರು ಅವರ ಮೇಲೆ ಅವಲಂಭಿತವಾಗಿದ್ದಾರೆ. ಅವರು ತಮಗೆ ತಿಳಿದಂತೆ ಎಂದು BPL, APL ಎಂದು ಗುರುತಿಸುವಂಥಾ ವ್ಯವಸ್ಥೆ ನಡೆದಿದೆ. ಅವರು ಯಾರನ್ನು ಗುರುತಿಸುತ್ತಾರೋ ಆ ಪಡಿತರ ಚೀಟಿಯನ್ನು ತಮ್ಮ ಹತ್ತಿರ ಇಟ್ಟುಕೊಂಡು, ರೇಷನ್ ಮಾರುವಂಥಾ ವ್ಯವಸ್ಥೆ ಇದೆ. ಅದಕ್ಕೆ ಇದು ಅಸ್ತವ್ಯಸ್ಥವಾಗಿದೆ. ಇದಕ್ಕೆ ಸರ್ಕಾರ ಒಂದು ಬಿಗಿ ಕ್ರಮವನ್ನು ತೆಗೆದುಕೊಂಡು, ಆಹಾರ ಇಲಾಖೆಯ ಅಧಿಕಾರಿಗಳಿಂದಾಗಲಿ, ಕಂದಾಯ ಇಲಾಖೆಯ ಅಧಿಕಾರಿಗಳಿಂದಾಗಲಿ, ಸರ್ವೆ ಕೆಲಸ ಮಾಡಿಸಿದರೆ, ಈ ವ್ಯವಸ್ಥೆ ಸರಿ ಹೋಗುತ್ತದೆ. ಈ ವ್ಯವಸ್ಥೆಯಾಗಬೇಕೆಂದು ನಾನು ತಮ್ಮ ಮುಖಾಂತರ ಸರ್ಕಾರಕ್ಕೆ ತಿಳಿಸುತ್ತೇನೆ.

ಶ್ರೀ ಕೆ.ಜಯಪ್ರಕಾಶ್ ಹೆಗ್ಡೆ: ಮಾನ್ಯ ಅಧ್ಯಕ್ಷರೆ, ನಾನು ಒಂದೇ ಒಂದು ಸಲಹೆ ಕೊಡುವುದೇನೆಂದರೆ, ಈಗ ಗ್ಯಾಸ್ ತೆಗೆದುಕೊಳ್ಳುವುದಕ್ಕೆ ರೇಷನ್ ಕಾರ್ಡ್ ಬೇಕೆಂದು ಹೇಳುತ್ತಾರೆ. Any identification ಸಾಕು. ನನಗೆ ರೇಷನ್ ಕಾರ್ಡ್ ಬೇಡ, ನಾನು ಗ್ಯಾಸ್ ತೆಗೆದುಕೊಳ್ಳಬೇಕಾದರೆ, ರೇಷನ್ ಕಾರ್ಡ್ ತೋರಿಸು ಎಂದು ಹೇಳಬೇಡಿ. ಯಾವುದೇ identification ತೋರಿಸಿದರೂ ಗ್ಯಾಸ್ ಕೊಡುವಂಥಾ ವ್ಯವಸ್ಥೆಯಾಗಬೇಕು.

ಶ್ರೀ ಗೋವಿಂದ ಎಂ.ಕಾರಜೋಳ(ಆಹಾರ ಮತ್ತು ನಾಗರೀಕ ಸರಬರಾಜು ಹಾಗೂ ಗ್ರಾಹಕರ ವ್ಯವಹಾರಗಳ ಸಚಿವರು): ಮಾನ್ಯ ಅಧ್ಯಕ್ಷರೆ, ನಾನು 1985 ರಿಂದ ಆಗಿರುವಂಥಾದ್ದನ್ನು detail ಆಗಿ ಹೇಳಿಕೊಂಡು ಬರಲಾ?

ತಾವು ನನಗೆ time ಹೆಚ್ಚಿಗೆ ಕೊಟ್ಟರೆ, ನಾನು ಈ ವ್ಯವಸ್ಥೆ ಜಾರಿಗೆ ಬಂದಿರುವ ಬಗ್ಗೆ details ಕೊಡುತ್ತೇನೆ.

ಶ್ರೀ ಕೆ.ಶ್ರೀನಿವಾಸಗೌಡ: ಹೇಳಿ.

ಶ್ರೀ ಗೋವಿಂದ ಎಂ.ಕಾರಜೋಳ: ಮಾನ್ಯ ಅಧ್ಯಕ್ಷರೆ, ನಮ್ಮ ಕಾಲದ್ದು ಆಯಿತು. ಸದನಕ್ಕೆ details , ಗೊತ್ತಾಗಬೇಕು. ಈಗ 1985ರದ್ದು ಬೇಡ, 2003ರಿಂದ ಆಗಿರುವಂಥಾದ್ದನ್ನು ಹೇಳುತ್ತೇನೆ. ರಾಜ್ಯದಲ್ಲಿ ದಿ:2.10.2003ಕ್ಕೆ 63 ಲಕ್ಷ BPL card ಕೊಡಬೇಕೆಂದು ಸರ್ಕಾರ ತೀರ್ಮಾನ ಮಾಡಿತ್ತು. ಅದನ್ನು ಕೊಟ್ಟ ನಂತರ ಕೆಲವರು ಬಿಟ್ಟು ಹೋಗಿದೆಯೆಂದು ಜನರು ಗಲಾಟೆ ಮಾಡಿದರು. ಜನರು ಗಲಾಟೆ ಮಾಡಿದಾಗ ಅರ್ಜಿಯನ್ನು ತೆಗೆದುಕೊಂಡರು. ಅದು 36 ಲಕ್ಷ ಹೆಚ್ಚುವರಿ ಅರ್ಜಿಗಳು ಬಂತು. ಅದರಲ್ಲಿ 20,21,000 eligible persons ಎಂದು ಗುರುತಿಸಿ, ಅವರಿಗೆ BPL card ಗಳನ್ನು ಕೊಟ್ಟರು. ಅದು ಆದ ನಂತರ ಮತ್ತೆ ಗಲಾಟೆ ಶುರುವಾಯಿತು. ಈ 20,21,00 ಕಾರ್ಡ್‌ಗಳನ್ನು ಕೊಟ್ಟ ಮೇಲೂ ಜನರು ಇದರಿಂದ ಹಿಂದೆ ಸರಿಯಲಿಲ್ಲ, ಮತ್ತೆ ಹಿಂದೆ ದಿ: 1.11.1985ರಲ್ಲಿ ಹಸಿರು ಕಾರ್ಡ್ ಅನ್ನು ಕೊಟ್ಟಿದ್ದರು., ನಮಗೆಲ್ಲಾ ಬಿಟ್ಟುಹೋಗಿದೆ, ನಮಗೆ ಕಾರ್ಡ್ ಕೊಟ್ಟಿಲ್ಲವೆಂದು 14, 43,00 ಜನರು ಮತ್ತೆ ಅರ್ಜಿಗಳನ್ನು ಕೊಟ್ಟರು. ಅದರಲ್ಲಿ ಬಿಟ್ಟು ಹೋಗಿದ್ದವರಿಗೆ temporary cards ಕೊಡಬೇಕೆಂದು ನಿರ್ಧಾರ ಮಾಡಿ, ತಾತ್ಕಾಲಿಕ ಪಡಿತರ ಚೀಟಿ 14,43,000 ಕೊಟ್ಟರು. ಮತ್ತೆ ಮಾರ್ಚ್ 2004ರಲ್ಲಿ ಚುನಾವಣೆ ನಂತರ ಮತ್ತೆ 8,54,583 ಕಾರ್ಡ್‌ಗಳನ್ನು ರದ್ದು ಮಾಡಿದರು. ಮತ್ತೆ ಕೆಲವು ಜನರು ನಮಗೆ BPLನಿಂದ ಬಿಟ್ಟು ಹೋಗಿದೆ, ನಮಗೆ ಅನ್ಯಾಯವಾಗಿದೆಯೆಂದು, ಜನರು ಗಲಾಟೆ ಮಾಡಿದರು. ಆಗ ಕೇಂದ್ರ ಸರ್ಕಾರ ಒಂದು ನಿಬಂಧನೆಯನ್ನು ಹಾಕಿತು. ಇಲ್ಲಿ ಬಡತನ ರೇಖೆಗಿಂತ ಕೆಳಗೆ ಇರುವಂಥ ಕುಟುಂಬಗಳು 31,29,000 ಮಾತ್ರ ಇವೆ. ಅವರಿಗೆ ಮಾತ್ರ ಕೊಡಬೇಕೆಂದು ಹೇಳಿತು. ಆದರೆ ರಾಜ್ಯದಲ್ಲಿ 70,17,000 ಕುಟುಂಬಗಳಿಗೆ BPL ಕಾರ್ಡ್ ಕೊಟ್ಟಿದ್ದರು. ಅದರಲ್ಲಿ 70,17,000ದೊಳಗೆ 38.88 ಲಕ್ಷ ರಾಜ್ಯ ಸರ್ಕಾರವೇ ಹೆಚ್ಚುವರಿ ಸಬ್ಸಿಡಿ amount ಅನ್ನು ಭರಿಸುತ್ತಾ ಇತ್ತು. ದಿ: 10.1.2005ರಲ್ಲಿ ಸರ್ಕಾರ ಒಂದು ಆದೇಶವನ್ನು ಹೊರಡಿಸಿ, ಈ ಗೊಂದಲವನ್ನು ನಿವಾರಣೆ ಮಾಡಬೇಕೆಂದು, ಮನೆ ಮನೆಗಳ ಸಮೀಕ್ಷೆ ಮಾಡಬೇಕೆಂದು ಮಾಡಿತು. ಈ ಸಮೀಕ್ಷೆ ಕಾರ್ಯ ಜನವರಿ ತಿಂಗಳಿಂದ ಸೆಪ್ಟೆಂಬರ್ ತಿಂಗಳವರೆಗೂ ಆಯಿತು. ಆಗ ರಾಜ್ಯದಲ್ಲಿ ಮನೆ ಮನೆಗಳ ಸಮೀಕ್ಷೆ

ಕಾರ್ಯ ಮಾಡಿದಾಗ ಬಂದಂಥ ಅರ್ಜಿಗಳ ಸಂಖ್ಯೆ 1,11,17,620 ಕುಟುಂಬಗಳನ್ನು ಮನೆ ಮನೆಗಳಿಗೆ ಹೋಗಿ ಸಮೀಕ್ಷೆ ಮಾಡಿದರು. ಅದರಲ್ಲಿ ಕೊಟ್ಟಂಥ ಕಾರ್ಡ್‌ಗಳ ಸಂಖ್ಯೆ ಬಡವರಿಗೆ ಕೊಡುವಂಥಾದ್ದು ಅನ್ನಪೂರ್ಣ 36,644, AAY 11,78,448, BPL cardಗಳು 51,79,058 APL 47,23,476 ಕೊಟ್ಟರು. ಈ ಪೈಕಿ ಇವತ್ತು ಕೊಟ್ಟಂಥ ಕಾರ್ಡ್‌ಗಳು ಹಂಚಿಕೆಯಾಗಿರುವಂಥಾದ್ದು, ಏಕೆಂದರೆ ಕೆಲವರು ಕಾರ್ಡ್‌ಗಳನ್ನು ತೆಗೆದುಕೊಳ್ಳಲಿಲ್ಲ. ನಮಗೆ ಸಿಮೆಎಣ್ಣೆ ಸಿಕುವುದಿಲ್ಲ, ಅಕ್ಕಿ ಸಿಗುವುದಿಲ್ಲವೆಂದು ಕಾರ್ಡ್‌ಗಳು ತೆಗೆದುಕೊಳ್ಳಲಿಲ್ಲ. 1,6,10,417 ಕಾರ್ಡ್‌ಗಳನ್ನು ಹಂಚಿಕೆ ಮಾಡಿದರು. ಸಮೀಕ್ಷೆ ಸರಿಯಾಗಿ ಆಗಿಲ್ಲವೆಂದು ಮತ್ತೆ ಗಲಾಟೆ ಶುರುವಾಯಿತು. ಕೆಲವರು ಏನು ಹೇಳಿದರೆಂದರೆ, ನಮ್ಮದು ಅನ್ನಪೂರ್ಣದಲ್ಲಿ ಇದ್ದದ್ದು ಅಕ್ಷಯ ಆಗಿದೆ. BPL ಇದ್ದದ್ದು APL ಆಗಿದೆಯೆಂದು ಗಲಾಟೆ ಶುರುವಾದ ಮೇಲೆ ಮತ್ತೆ ಅರ್ಜಿ ಕೊಡುವುದಕ್ಕೆ ಸರ್ಕಾರ ಅವಕಾಶ ಮಾಡಿಕೊಟ್ಟಿತು. Form No.G-8ರಲ್ಲಿ ವರ್ಗ ಬದಲಾವಣೆಯಾಗಿರುವಂಥದ್ದು, Form No.G-9 ಅಂದರೆ, ಕಾರ್ಡ್ ಸಿಗದೇ ಇರುವಂಥ ಕುಟುಂಬಗಳು ಇದು ಒಟ್ಟು ಅರ್ಜಿಗಳು 64,70,000 ಬಂದವು. ಅದರಲ್ಲಿ ರಲ್ಲಿ G-8 ಬಂದಂಥಾ 15,70,371 ಅರ್ಜಿಗಳ ಪೈಕಿ ವರ್ಗ ಬದಲಾವಣೆಯಾದಂಥ eligible persons 7,40,877 ಅರ್ಜಿಗಳು ಅರ್ಹವೆಂದು ಅವರಿಗೆ ಈಗಾಗಲೇ BPL card ವಿತರಣೆ ಮಾಡಿದೆ. ಬೆಂಗಳೂರಿನಲ್ಲಿ ಎಲ್ಲಾ ಸೇರಿ 61.66 ಲಕ್ಷ ಕಾರ್ಡುಗಳನ್ನು ಕೊಟ್ಟಿದೆ. ಗಣಕೀಕೃತ ಅರ್ಜಿಯನ್ನು ಕೊಡಬೇಕೆಂದ ಮೇಲೆ 64.70 ರಲ್ಲಿ 41,35, 670 ಹೊಸ ಚೀಟಿ ಬೇಕು, ನಮಗೆ ಯಾವುದೇ ಕುಟುಂಬಗಳಿಗೆ ಚೀಟಿ ಇಲ್ಲವೆಂದವರ ಅರ್ಜಿಗಳನ್ನು ಪರಿಶೀಲನೆ ಮಾಡಿ 12,71,000 ಅರ್ಜಿಗಳು ಅರ್ಹ BPL ಕುಟುಂಬಗಳೆಂದು ಗುರುತಿಸಿ, ಇವತ್ತು ಆ ಕಾರ್ಡ್‌ಗಳ ವಿತರಣೆಯನ್ನು ಪ್ರಾರಂಭ ಮಾಡಿದೆ. ಬೆಂಗಳೂರಿನಲ್ಲೂ ಕೂಡ 6,20,000 ಅರ್ಜಿಗಳು ಈಗಾಗಲೇ ಬಂದಿವೆ. ಅವುಗಳ ಪರೀಶೀಲನೆ ಕಾರ್ಯ ಮುಂದುವರೆದಿದೆ. ಮಾನ್ಯ ಮಾಧುಸ್ವಾಮಿಯವರು ಹೇಳಿದಂತೆ ಜಿಲ್ಲೆಗೆ ಒಂದೊಂದು ತರಹದ ಮಾನದಂಡಗಳನ್ನು ನಿಗದಿ ಮಾಡಿಲ್ಲ. ಹಿಂದೆ ಈ ವಿಷಯದಲ್ಲಿ ಗೊಂದಲವಾಗಿತ್ತು. ಟಿ.ವಿ. ಇದ್ದವರಿಗೆ ಕೊಡಬಾರದು, ಟಿ.ವಿ.ಎಸ್. ಇದ್ದವರಿಗೆ ಕೊಡಬಾರದು, ಮೊಪೆಡ್ ಇದ್ದವರಿಗೆ ಕೊಡಬಾರದು, ಈ ರೀತಿಯಾಗಿ ಒಂಭತ್ತು ಮಾನದಂಡಗಳನ್ನು ಹಾಕಿದ್ದರು. ಆ ಎಲ್ಲಾ ಮಾನದಂಡಗಳನ್ನು ಸಡಿಲಿಸಿ, ಇವತ್ತು ಆದಾಯವನ್ನೇ ಮೂಲವಾಗಿಟ್ಟುಕೊಂಡು ಕೊಡುತ್ತಿದ್ದೇವೆ. ಗ್ರಾಮೀಣ ಪ್ರದೇಶದಲ್ಲಿರತಕ್ಕಂಥವರ

ವಾರ್ಷಿಕ ಆದಾಯ 12 ಸಾವಿರ ಮತ್ತು ಪಟ್ಟಣ ಪ್ರದೇಶದಲ್ಲಿರತಕ್ಕಂಥವರ ವಾರ್ಷಿಕ ಆದಾಯ 17 ಸಾವಿರ ಇರತಕ್ಕಂಥವರಿಗೆ ಕೊಡಬೇಕು ಎನ್ನುವುದನ್ನು ಮಾಡಿದ್ದು, ಟಿ.ವಿ., ಟಿ.ವಿ.ಎಸ್., ಮೊಪೆಡ್, ಸೆಲ್‌ಫೋನ್ ಇಂಥ ನಿಬಂಧನೆಗಳನ್ನು ಕಡಿತಗೊಳಿಸಿ ಕೆಲವೇ ನಿಬಂಧನೆಗಳನ್ನು ಹಾಕಿದ್ದೇವೆ. ಏಕೆಂದರೆ, ಒಣ ಬೇಸಾಯ ಭೂಮಿ 3 ಹೆಕ್ಟೇರ್‌ವರೆಗೂ ಇದ್ದರೆ ಕೊಡಬಹುದು ಎಂದು ಹೇಳಿದ್ದೇವೆ. ಏಕೆಂದರೆ ಒಣ ಬೇಸಾಯದಲ್ಲಿ ಅವರು ಏನೂ ಬೆಳೆಯಲಿಕ್ಕೆ ಸಾಧ್ಯವಾಗುವುದಿಲ್ಲ. ಒಣ ಬೇಸಾಯ ಮಾಡತಕ್ಕಂಥವರು 10 ಎಕರೆ ಜಮೀನು ಇದ್ದರೂ ಸಹ ಇವತ್ತು ದುಡಿಯಲಿಕ್ಕಾಗಿ ಗುಳೇ ಹೋಗತಕ್ಕಂಥ ಪರಿಸ್ಥಿತಿ ಇದೆ. ಅವರು ಮಹಾರಾಷ್ಟ್ರಕ್ಕೋ, ಗೋವಾಕ್ಕೋ, ಮಂಗಳೂರಿಗೋ, ಬೆಂಗಳೂರಿಗೋ ಬರತಕ್ಕಂಥ ಪರಿಸ್ಥಿತಿ ಇದೆ. ಅದಕ್ಕಾಗಿ, ಯಾವ ಬಡವರ ಆದಾಯ ಕಡಿಮೆ ಇದೆಯೋ ಅಂಥವರಿಗೆ ಕೊಡಬೇಕು ಎನ್ನುವ ನಿಬಂಧನೆಯನ್ನು ಹಾಕಿದ್ದೇವೆ. ಇದೆಲ್ಲಾ ಆದ ನಂತರವೂ ಕೂಡ ಇವತ್ತು ಸಮಸ್ಯೆ ಬಗೆಹರಿದಿಲ್ಲ. ನಾನು ರಾಜ್ಯದಲ್ಲಿ ಸುಮಾರು 12 ಗ್ರಾಮಗಳಿಗೆ ಹೋಗಿ ನೋಡಿದ್ದೇನೆ. ಹೀಗೆ ನೋಡಿದಂಥ ಸಂದರ್ಭದಲ್ಲಿ ಕಂಡು ಬಂದ ಅಂಶವೆಂದರೆ, ಕೆಲವರಲ್ಲಿ ಏನು ತಪ್ಪು ಕಲ್ಪನೆ ಇದೆ ಎಂದರೆ, ನಮಗೆಲ್ಲರಿಗೂ ಅಂತ್ಯೋದಯ ಕಾರ್ಡೇ ಬೇಕು, ಅನ್ನಪೂರ್ಣ ಕಾರ್ಡೇ ಬೇಕು ಎನ್ನುವಂತಹ ಭಾವನೆ ಬಹಳಷ್ಟು ಜನರಲ್ಲಿ ಇದೆ. ನಾನು ನೋಡಿದಂಥ ಹಳ್ಳಿಗಳಲ್ಲಿ 10–12 ಕುಟುಂಬಗಳಿಗೆ ಮಾತ್ರ ಸಿಕ್ಕಿಲ್ಲ. ಉಳಿದಂಥ ಕುಟುಂಬಗಳಿಗೆ ಸಿಕ್ಕಿದೆ. ಬಹಳಷ್ಟು ಜನ ಅನರ್ಹರೂ ಕೂಡ ತೆಗೆದುಕೊಂಡಿದ್ದಾರೆ. ಅನರ್ಹರನ್ನು ತೆಗೆಯುತಕ್ಕಂಥ ಕಾರ್ಯ ಒಂದು ಕಡೆ ನಡೆಯುತ್ತಿದೆ. ಸರ್ಕಾರದ ಮುಖ್ಯ ಕಾರ್ಯದರ್ಶಿಗಳ ಕಡೆಯಿಂದ ಎಲ್ಲಾ ಜಿಲ್ಲಾಧಿಕಾರಿಗಳಿಗೆ D.O. letter ಬರೆಸಿದ್ದು, ಕೂಡಲೇ ಎಲ್ಲರಿಗೂ ಕಾರ್ಡುಗಳನ್ನು ಹಂಚಿಕೆ ಮಾಡಬೇಕೆಂದು ಈಗಾಗಲೇ ಹೇಳಿದ್ದೇವೆ. ರಾಜ್ಯದಲ್ಲಿ ಈವರೆಗೆ 73, 29, 437 B.P.L. ಕಾರ್ಡ್‌ಗಳನ್ನು ಕೊಟ್ಟಿದ್ದೇವೆ. G-9 ಸಲ್ಲಿಸಿರತಕ್ಕಂಥ ಅಂದರೆ ಯಾವುದೇ ಕಾರ್ಡ್ ಇಲ್ಲದೇ ಇರತಕ್ಕಂಥ ಸುಮಾರು 12 ಲಕ್ಷ 71 ಸಾವಿರದ ಕುಟುಂಬಗಳಿಗೆ ಕೂಡಲೇ ಕಾರ್ಡುಗಳನ್ನು ಕೊಡಬೇಕು ಎಂದು ಹೇಳಿದ್ದೇವೆ. B.P.L. ಕಾರ್ಡುಗಳು ಈ ರಾಜ್ಯದ ಸರಾಸರಿ 72.89% ಆಗುತ್ತದೆ. ಕೇಂದ್ರ ಸರ್ಕಾರದವರು ಒಂದು ಪತ್ರ ಬರೆದು, ನಿಮ್ಮದು ಇಡೀ ರಾಷ್ಟ್ರದಲ್ಲೇ ಹೆಚ್ಚು B.P.L. ಕಾರ್ಡ್ ಕೊಟ್ಟಂಥ ರಾಜ್ಯವಾಗಿದೆ. ಮೊದಲನೆಯದು, ಆಂಧ್ರಪ್ರದೇಶ, ಅವರು 67.42% ಕೊಟ್ಟಿದ್ದಾರೆ. ಕರ್ನಾಟಕದವರು ಈಗಾಗಲೇ 63.17%

ಕೊಟ್ಟಿದ್ದೀರಿ, ಇದು ಹೆಚ್ಚಾಗಿದೆ ಎಂದು objection ಮಾಡಿದ್ದಾರೆ. ನಾವು ಅಕ್ಕಿಯನ್ನು 39.29 ಲಕ್ಷ ಕುಟುಂಬಗಳಿಗೆ ಮಾತ್ರ ಕೊಡುತ್ತೇವೆ, ನಂತರ ನಿಲ್ಲಿಸುತ್ತೇವೆ ಎನ್ನುವುದನ್ನೂ ಸಹ ಕೇಂದ್ರ ಸರ್ಕಾರದವರು ಪತ್ರದ ಮುಖಾಂತರ ತಿಳಿಸಿದ್ದಾರೆ. ಸಬ್ಸಿಡಿ ಬರ್ಡನ್ ಹೆಚ್ಚಾದರೂ ಚಿಂತೆಯಿಲ್ಲ, ಅಕ್ಕಿ ಕೊಡಲು ಸರ್ಕಾರ ಸಿದ್ದವಿದೆ. ಯಾವುದೇ ಜಿಲ್ಲೆಗೆ ಒಂದೊಂದು ತರಹದ ಮಾನದಂಡವನ್ನು ಹಾಕಿಲ್ಲ. ಮಾಧುಸ್ವಾಮಿಯವರು ಹೇಳಿದರು, ಕೆಲವು ಜಿಲ್ಲೆಗಳಿಗೆ 100% ಮಾಡಿದಿರಿ, ಕೆಲವು ಜಿಲ್ಲೆಗಳಿಗೆ 102% ಮಾಡಿದಿರಿ ಕೆಲವು ಜಿಲ್ಲೆಗಳಿಗೆ 60% ಮಾಡಿದಿರಿ, ಕೆಲವು ಜಿಲ್ಲೆಗಳಿಗೆ 65% ಮಾಡಿದಿರಿ ಎಂದು ಹೇಳಿದರು. ಆ ರೀತಿ ರಾಜ್ಯದಲ್ಲಿ ಯಾವ ಜಿಲ್ಲೆಗಳಿಗೂ ಬೇರೆ ಬೇರೆ ಮಾನದಂಡಗಳನ್ನು ನಿಗದಿ ಮಾಡಿಲ್ಲ. ಎಲ್ಲರಿಗೂ ಒಂದೇ ತರಹದ ಮಾನದಂಡ ಇದೆ. ಇಡೀ ರಾಜ್ಯದಲ್ಲಿರುವ ಬಡವರಿಗೆ ಸಿಗಬೇಕು ಎನ್ನುಕ್ಕಂಥ ಉದ್ದೇಶದಿಂದ ಈಗಾಗಲೇ ಆದೇಶವನ್ನು ಕಳುಹಿಸಿದ್ದೇವೆ.

ಶ್ರೀ ಜೆ.ಸಿ.ಮಾಧುಸ್ವಾಮಿ: ಅವರಿಗೆ ನಾನು ತಂದು ತೋರಿಸುತ್ತೇನೆ. ಅವರಿಗೆ ನಾನು ಫೈಲ್ ತಂದು ಕೊಟ್ಟುಬಿಡುತ್ತೇನೆ. ಎಲ್ಲಾ ಜಿಲ್ಲೆಗಳಲ್ಲೂ D.C. ಯವರು, ನೀವು ಹೀಗೆ ಮಾಡಿ, ಆದರೆ 65% ಮೀರಬೇಡಿ, 62% ಮೀರಬೇಡಿ, ಎಂದು ತಹಶೀಲ್ದಾರ್‌ರವರಿಗೆ ಕಾಗದ ಬರೆದಿದ್ದರೆ ನೀವು ಏನು ಮಾಡುತ್ತೀರಿ? ನಮ್ಮ ಜಿಲ್ಲೆಯಲ್ಲಿ ಬರೆದಿದ್ದಾರೆ. ಇಲ್ಲದಿದ್ದರೆ ನಾನು ನಮಗೆ ಶರಣಾಗುತ್ತೇವೆ. ಬರೆದಿಲ್ಲ ಎಂದರೆ ನೀವೇನಾಗುತ್ತೀರಿ ಎನ್ನುವುದನ್ನು ಹೇಳಬೇಕು. You must say. ಹುಡುಗಾಟಕ್ಕೆ ಮಾತನಾಡಲಿಕ್ಕೆ ಇಲ್ಲಿಗೆ ನಾವು ಬಂದಿಲ್ಲ. ಇಷ್ಟು ಪರ್ಸೆಂಟನ್ನು ಮೀರದ ಹಾಗೆ ನೀವು verify ಮಾಡಿ ಎಂದು D.C. ಯವರು ಆದೇಶ ಕೊಡುತ್ತಿದ್ದಾರೆ. ಒಂದು ಕಡೆ ನೀವೇ ಹೇಳಿದ್ದೀರಿ, ಹಾಸನ ಜಿಲ್ಲೆಯಲ್ಲಿ 102%, 104% ಇದೆ ಎಂದು ಹೇಳಿದ್ದೀರಿ. ಅದಕ್ಕೆ ನಮಗೇನೂ ನೋವಿಲ್ಲ. ಚೆನ್ನಾಗಿರಲಿ ಅವರು. ಅದು ಮುಖ್ಯಮಂತ್ರಿಯವರ ಜಿಲ್ಲೆ, ಮುಂದಿನ ಮುಖ್ಯಮಂತ್ರಿಯವರು ಇರುವ ಜಿಲ್ಲೆ. ನಿಮ್ಮ ಜಿಲ್ಲೆಗೆ 102% ಅಕ್ಕಿ ಕೊಟ್ಟುಕೊಳ್ಳಿ. ಆದರೆ ನಮ್ಮ ಜಿಲ್ಲೆಯಲ್ಲಿರುವ ಬಡವರಿಗೂ ಒಂದು ಸ್ವಲ್ಪ ಕೊಡಿ. ತುಮಕೂರಿನಲ್ಲಿ 62% ಕೊಡುತ್ತೀರಿ. 100% irrigation ಇರುವ ಜಿಲ್ಲೆಯಲ್ಲಿ 102% ಕೊಡುತ್ತೀರಿ. D.C. ಯವರು ಆ ರೀತಿ instruction ಕೊಟ್ಟಿಲ್ಲ ಎಂದು ಹೇಳಿಬಿಡಿ. ನಾನು ರಾಜೀನಾಮೆ ಕೊಡುತ್ತೇನೆ. ಇಲ್ಲವೆಂದರೆ, ನೀವು ಕೊಡುವುದಕ್ಕೆ ತಯಾರಾಗಿ. You must say.

ಶ್ರೀ ಕೆ.ಜಯಪ್ರಕಾಶ ಹೆಗ್ಡೆ: ಅವರು ಮಾಡಿರುವುದು need based ಆಗಿಲ್ಲ.

ಶ್ರೀ ಜೆ.ಸಿ.ಮಾಧುಸ್ವಾಮಿ: Need based ಆಗಿ ನೀವು ಎಲ್ಲಿ ಮಾಡಿದ್ದೀರಿ? ನಮ್ಮ ಕಡೆಗಳಲ್ಲಿ 62%ಗೆ ಅಕ್ಕಿ ನಿಲ್ಲಿಸುತ್ತೀರಿ. ಇನ್ನೊಂದು ಕಡೆ ನೀವು 102% ಅಕ್ಕಿ ಕೊಡುತ್ತೀರಿ. ಅಧ್ಯಕ್ಷರೇ, ನನಗೆ 15 ನಿಮಿಷ ಟೈಂ ಕೊಡಿ, ನಾನು ರೂಂಗೆ ಹೋಗಿ ದಾಖಲೆಗಳನ್ನು ತಂದು ಕೊಡುತ್ತೇನೆ.

ಅಧ್ಯಕ್ಷರು: ಈಗ ಸರ್ವೆ ಮಾಡಿದ್ದಾರಲ್ಲ....

ಶ್ರೀ ಜೆ.ಸಿ.ಮಾಧುಸ್ವಾಮಿ: 60% ದಾಟಕೂಡದು ಎಂದು ಹೇಳಿರುವಾಗ ಸರ್ವೆ ಮಾಡಿ ಏನು ಮಾಡುತ್ತೀರಿ? ವಾರ್ಷಿಕ ವರಮಾನ 12 ಸಾವಿರ, 17 ಸಾವಿರ ಎಂದು ನಿಗದಿ ಮಾಡಿದ್ದೇವೆ ಎಂದು ಹೇಳುತ್ತಾರೆ, ಅದು ಸತ್ಯ. ಆದರೆ, ಜಿಲ್ಲಾಧಿಕಾರಿಯವರು ಒಂದು ಆದೇಶ ಕೊಡುತ್ತಾರೆ, ನೀವು ಈ ರೀತಿ ಮಾಡಿ, ನಿಮ್ಮ ಫಲಾನುಭವಿಗಳು 65% ದಾಟಕೂಡದು, 67% ದಾಟಕೂಡದು, 70% ದಾಟಕೂಡದು ಎಂದು ಹೇಳಿದ್ದಾರೆ ಮಂತ್ರಿಗಳೇ.

ಡಾ॥ ಶರಣ ಪ್ರಕಾಶ್ ರುದ್ರಪ್ಪ ಪಾಟೀಲ್: ಮಾನ್ಯ ಅಧ್ಯಕ್ಷರೇ, ನಮ್ಮ ಜಿಲ್ಲೆಗೂ ಆ ರೀತಿಯ direction ಬಂದಿದೆ.

ಶ್ರೀ ಗೋವಿಂದ ಎಂ.ಕಾರಜೋಳ: ಸರ್ಕಾರದಿಂದ ಏನು direction ಕೊಟ್ಟಿದ್ದೇವೆ, ಆ ಲೆಟರ್ ಅನ್ನು ಓದುತ್ತೇನೆ. ಅದನ್ನು ನೀವು ಕೇಳಿ. ಬೇಕಾದರೆ ನಿಮಗೆ ಅದರ ಕಾಪಿಯನ್ನೇ ಕಳುಹಿಸಿಕೊಡುತ್ತೇನೆ. ನೀವು ಹೇಳುತ್ತಿರುವಂಥಾದ್ದು ಇದರಲ್ಲಿ ಇದೆಯೇ ಎಂದು ನೀವು ನೋಡಿಬಿಡಿ. Chief Secretary ಯವರಿಂದ ಎಲ್ಲಾ ಜಿಲ್ಲಾಧಿಕಾರಿಗಳಿಗೆ D.O. letter ಬರೆಸಿದ್ದೇನೆ.

ಶ್ರೀ ಜೆ.ಸಿ.ಮಾಧುಸ್ವಾಮಿ: ಆ ರೀತಿ instruction ಕೊಟ್ಟಿಲ್ಲ ಎಂದು ಹೇಳಿಬಿಡಿ ಸಾಕು. ಆ condition ನಮ್ಮ ನೀತಿಯಲ್ಲ, ನಿಮ್ಮಲ್ಲಿರುವ ಎಲ್ಲ ಬಡವರನ್ನು identify ಮಾಡಿ, ಎಷ್ಟು ಜನಕ್ಕಾದರೂ ಕೊಡಿ ಎಂದು ಮಂತ್ರಿಗಳು ಇಲ್ಲಿ ಹೇಳಿಬಿಡಲಿ.

ಶ್ರೀ ಎ.ಕೃಷ್ಣಪ್ಪ: Government S.C./S.T. Hostels, Backward Class Hostelsಗೆ ration supply ಅನ್ನು ಸಂಪೂರ್ಣವಾಗಿ ನಿಲ್ಲಿಸಿಬಿಟ್ಟಿದ್ದೀರಿ. ಈ ರೀತಿಯಾದರೆ ಆ ಮಕ್ಕಳ ಗತಿಯೇನು? ಹಾಸ್ಟೆಲ್‌ಗಳವರು 12 ರೂಪಾಯಿ, 14 ರೂಪಾಯಿಗಳನ್ನು ಒಂದು ಕೆ.ಜಿ. ಅಕ್ಕಿಗೆ ಕೊಟ್ಟು, ಮಾರುಕಟ್ಟೆಯಲ್ಲಿ ತಂದು

ಆ ಮಕ್ಕಳನ್ನು ಸುಧಾರಿಸಲು ಆಗುತ್ತದೆಯೇ? ಈ ರೀತಿಯಾಗಿ ನೀವು ರಾಜ್ಯದಲ್ಲಿ ಹೊಸ ಹೊಸ ವಿಚಾರಗಳನ್ನು ಜಾರಿ ಮಾಡಿ, ಬಡವರ ಮಕ್ಕಳಿಗೆ ಸಿಗಬೇಕಾದಂಥ ಸೌಲಭ್ಯಗಳನ್ನು ನಲ್ಲಿಸಿದ್ದೀರಲ್ಲ, ಇದು ನಮಗೆ ಸಮ್ಮತವಾಗಿದೆಯೇ? ಅದನ್ನು ಯಾವ ಕಾರಣಕ್ಕಾಗಿ ನಿಲ್ಲಿಸಿದ್ದಿರಿ? Poverty elimination programme ಮಾಡುತ್ತೇವೆ, treasury ತುಂಬಿ ತುಳುಕುತ್ತಿದೆ ಎಂದು ಹೇಳುವಂಥ ನೀವು ಹಾಸ್ಟೆಲ್‌ಗಳ ಮಕ್ಕಳಿಗೆ ಕೊಡುವ ಅಕ್ಕಿಯನ್ನು ನಲ್ಲಿಸಿದ್ದೀರಲ್ಲ. ಅದನ್ನೂ ಕೂಡ ದಯಮಾಡಿ ಹೇಳಿ.

ಶ್ರೀ ಗೋವಿಂದ ಎಂ.ಕಾರಜೋಳ: B.P.L. ಕಾರ್ಡುದಾರರ ವಿತರಣೆಗೆಂದು ಬಂದಂಥ ಅಕ್ಕಿಯನ್ನು ಹಾಸ್ಟೆಲ್‌ಗಳಿಗೆ ಕೊಡಬೇಕೆಂದು ಸರ್ಕಾರ ಯಾವತ್ತೂ ಆದೇಶ ಮಾಡಿಲ್ಲ. ನಮ್ಮಲ್ಲಿ ಹೆಚ್ಚುವರಿ ಇದ್ದರೆ ಹಾಸ್ಟೆಲ್‌ಗಳಿಗೆ ಕೊಡುತ್ತೇವೆ. ಇಲ್ಲದಿದ್ದರೆ, ಹಾಸ್ಟೆಲ್‌ಗಳ ಗ್ರ್ಯಾಂಟ್‌ನಲ್ಲಿ ಅವರು ವ್ಯವಸ್ಥೆ ಮಾಡಿಕೊಂಡು, ಅಲ್ಲಿನ ಮಕ್ಕಳಿಗೆ ಊಟವನ್ನು ಕೊಡತಕ್ಕಂಥ ವ್ಯವಸ್ಥೆಯನ್ನು ಮಾಡುತ್ತಾರೆ.

ಶ್ರೀ ಎ.ಕೃಷ್ಣಪ್ಪ: ತಾವು ಹೇಳತಕ್ಕಂಥಾದ್ದು ಸರಿಯಲ್ಲ. ಕಾರಣವೇನೆಂದರೆ, ಇದುವರೆಗೂ ಯಾವತ್ತೂ ಕೂಡ ಸರ್ಕಾರ ಒಂದು ನೀತಿಯನ್ನು ಅನುಸರಿಸಿಕೊಂಡು ration ಅನ್ನು ಆ ಮಕ್ಕಳಿಗಾಗಿ ಕೊಡುತ್ತಿದ್ದರು. ನಾನೂ ಸಹ ಆ ಇಲಾಖೆಯಲ್ಲಿ ಎರಡೂವರೆ ವರ್ಷಗಳ ಕಾಲ Minister ಆಗಿ ಕೆಲಸ ಮಾಡಿದ್ದೇನೆ. ಇದು compulsory mandatory ಯಲ್ಲ. But it has become convention. It is in practice over a period of years. How can you stop this?

ಶ್ರೀ ಸೋಮಣ್ಣ: ಸನ್ಮಾನ್ಯ ಮುಖ್ಯಮಂತ್ರಿಗಳು ಇದರ ಬಗ್ಗೆ ಸ್ವಲ್ಪ ಗಮನ ಹರಿಸಬೇಕು. S.C./S.T. ಅಥವಾ Backward Class Hostelಗಳಲ್ಲಿರುವ ಒಬ್ಬ ಮಗುವಿಗೆ 440 ರೂಪಾಯಿಗಳನ್ನೋ, ಮುನ್ನೂರು ಚಿಲ್ಲರೆ ರೂಪಾಯಿಗಳನ್ನೋ ಕೊಡುತ್ತಿದ್ದೇವೆ. ಅಲ್ಲಿರುವ ಮಕ್ಕಳಿಗೆ ಬೆಳಗ್ಗೆ ಊಟ, ಮಧ್ಯಾಹ್ನ ಟಿಫಿನ್ ಮತ್ತು ಸಾಯಂಕಾಲ ಊಟ ಕೊಡಬೇಕು ಎಂದು ಇದೆ. ನನ್ನ ಕ್ಷೇತ್ರದಲ್ಲಿ 5 ಹಾಸ್ಟೆಲ್‌ಗಳಿವೆ. 4–5 ದಿನಗಳ ಹಿಂದೆ ನಾನು ಆ ಹಾಸ್ಟೆಲ್‌ಗಳಿಗೆ ಹೋಗಿದ್ದಾಗ ಅಲ್ಲಿ ಅಕ್ಕಿ ಇರಲಿಲ್ಲ. ಏಕೆ ಎಂದು ಕೇಳಿದರೆ supply ಇಲ್ಲ ಎಂದು ಹೇಳಿದರು. ಕೃಷ್ಣಪ್ಪನವರು ಹೇಳಿದಂತೆ ಸುಮಾರು ವರ್ಷಗಳಿಂದ ನಡೆದುಕೊಂಡು ಬಂದಿರುವಂಥ ಪದ್ಧತಿ ಇದು. ಯಾರೋ ಬಡವರ ಮಕ್ಕಳನ್ನು ಅಲ್ಲಿ ಸೇರಿಸಿ,

ಆ ಮಕ್ಕಳಿಗೆ ಊಟಕ್ಕಾಗಿ ಸರಿಯಾಗಿ ration ಕೊಡದಿದ್ದರೆ ಹೇಗೆ? ಇದಕ್ಕಿಂತ worst ಆಗಿರುವ ಅಕ್ಕಿ ಅಂಗಡಿಗಳಲ್ಲಿ 14–15 ರೂಪಾಯಿ ಕೆ.ಜಿ.ಗೆ ಇರುತ್ತದೆ. ಆದ್ದರಿಂದ ತಾವು ದಯಮಾಡಿ, ಮೊದಲಿನಂದ ಏನು ಮಾಡಿಕೊಂಡು ಬಂದಿದ್ದರು ಅದನ್ನು ಮುಂದುವರೆಸಿಕೊಂಡು ಹೋಗತಕ್ಕಂಥಾದ್ದಕ್ಕೆ ತಾವು ದಯಮಾಡಿ ಆದೇಶ ಕೊಡಬೇಕಾಗುತ್ತದೆ ಕಾರಜೋಳರೇ. ದಯಮಾಡಿ ಇದು ನಮ್ಮ ಕಾಲದಲ್ಲಿ ಈ ರೀತಿ ಆಗುವುದು ಬೇಡ. ಬಡವರ ಮಕ್ಕಳು ಓದುವುದಕ್ಕೆ ಅನಾನುಕೂಲವಾಗುವುದು ಬೇಡ.

ಶ್ರೀ ಎ.ಕೃಷ್ಣಪ್ಪ: ಮತ್ತೊಂದು ವಿಚಾರಕ್ಕೆ ಮಂತ್ರಿಗಳ ಗಮನವನ್ನು ಸೆಳೆಯುತ್ತಿದ್ದೇನೆ. ಹಾಸ್ಟೆಲ್‌ಗಳ ಮಕ್ಕಳಿಗೆ ಕೊಡುತ್ತಿದ್ದಂಥ quantities of food ಏನಾಗಿದೆ ಎಂದು ತಿಳಿಯಲು ದಯಮಾಡಿ ನೀವು ನಿಮ್ಮ ಜಿಲ್ಲೆಯಲ್ಲೇ ನಾಲ್ಕು ಹಾಸ್ಟೆಲ್‌ಗಳಿಗೆ surprise visit ಮಾಡಿ. 2 ಕಪ್ ಕೊಡುತ್ತಿದ್ದಂಥ ಅನ್ನವನ್ನು ಈಗ ಎಷ್ಟಕ್ಕೆ ಇಳಿಸಿದ್ದಾರೆ ಎಂದು ನೋಡಿ. ಹಾಸ್ಟೆಲ್‌ಗಳವರು ಮಕ್ಕಳ ಊಟಕ್ಕಾಗಿ ಅಕ್ಕಿಗೆ 12–14 ರೂಪಾಯಿಗಳನ್ನು ಒಂದು ಕೆ.ಜಿ.ಗೆ ಕೊಡುತ್ತಿರುವ ಕಾರಣ quantities ಏನಾಗಿದೆ ಎಂದು ನೋಡಿ. ಆ ಮಕ್ಕಳಿಗೆ ನಾಲ್ಕು varietyಯ ತರಕಾರಿಗಳನ್ನು ಹಾಕಬೇಕೆಂದು ಹೇಳಿದ್ದರು. ಈಗ ನಾಲ್ಕು variety ತರಕಾರಿಗಳನ್ನು ಹಾಕುತ್ತಿಲ್ಲ. ಟೊಮೊಟೊ ಇದ್ದರೆ ಬರೀ ಟೊಮೊಟೋನೇ ಇರುತ್ತದೆ, ಬದನೆಕಾಯಿ ಇದ್ದರೆ ಬರೀ ಬದನೆಕಾಯಿಯೇ ಇರುತ್ತದೆ. ನೀವು surprise check ಮಾಡಿ. ಅವರು ಏತಕ್ಕೆ ಹೀಗೆ ಮಾಡುತ್ತಿದ್ದಾರೆ ಎಂದರೆ, ಅವರಿಗೆ ಕಡಿಮೆ ದರದಲ್ಲಿ ಅಂದರೆ 3 ರೂಪಾಯಿ ಕೆ.ಜಿ.ಗೆ ಸಿಗುತ್ತಿದ್ದಂಥ ಅಕ್ಕಿಯನ್ನು ನೀವು ನಿಲ್ಲಿಸಿದ ಕಾರಣ expenditure ಜಾಸ್ತಿಯಾಯಿತು, ಮಕ್ಕಳಿಗೆ ಸಿಗಬೇಕಾದ ಆಹಾರ ಪದಾರ್ಥಗಳಲ್ಲಿ ಕಡಿತವಾಗಿದೆ. ಆದ್ದರಿಂದ ಹೇಳುತ್ತಿದ್ದೇನೆ, Food Minister, good Minister ಆಗಿ. ಮಕ್ಕಳಿಗೆ ಕೊಡುತ್ತಿದ್ದುದ್ದನ್ನು ನಿಲ್ಲಿಸಿ ಏಕೆ Bad Minister ಆಗುತ್ತೀರಿ?

ಡಾ॥ ಶರಣ ಪ್ರಕಾಶ್ ರುದ್ರಪ್ಪ ಪಾಟೀಲ್: ಮಾನ್ಯ ಸಚಿವರು ಸ್ಪಷ್ಟವಾಗಿ ಸದನದಲ್ಲಿ ಹೇಳಬೇಕು. ಯಾವುದೇ ಮತಕ್ಷೇತ್ರವಾಗಿರಲಿ, ಯಾವುದೇ ಜಿಲ್ಲೆ ಇರಲಿ, ಒಂದು ವೇಳೆ ಅವರು ಬಡವರು, ಅರ್ಹರು ಇದ್ದರೆ ಅವರಿಗೆ ಕೊಡುತ್ತೇವೆಂದು ಹೇಳಲಿ ಸಾಕು. ಇಷ್ಟೇ ಕೊಡಬೇಕೆಂದು ನೀವು ಯಾವುದೇ cap ಹಾಕುವುದಕ್ಕೆ ಹೋಗಬೇಡಿ. ಬಡವರು ಎಂದು ಒಂದು ವೇಳೆ ಅವರಿಗೆ ಅನಿಸಿದರೆ ನಾವು ಕೊಡುತ್ತೇವೆಂದು ನಿರ್ದಿಷ್ಟವಾದ ಉತ್ತರ ಕೊಟ್ಟರೆ ಅದನ್ನು ನಾವು accept ಮಾಡಿಕೊಳ್ಳುತ್ತೇವೆ.

ಶ್ರೀ ಗೋವಿಂದ ಎಂ.ಕಾರಜೋಳ: ಮಾನ್ಯ ಅಧ್ಯಕ್ಷರೆ, SC/ST ಮತ್ತು BCM hostel ಗಳಿಗೆ ಅಕ್ಕಿ ಕೊಡುವುದಕ್ಕೆ ನಿಲ್ಲಿಸಿದ್ದೀರಿ ಎಂದು ಇವರು ಹೇಳುತ್ತಿದ್ದಾರೆ. ನಿಲ್ಲಿಸಬೇಕೆಂದು ಸರ್ಕಾರ ಎಲ್ಲೂ ಹೇಳಲಿಲ್ಲ. ಅವರವರ ಜಿಲ್ಲೆಯಲ್ಲಿರತಕ್ಕಂಥದ್ದು, ಅವರು ಬೇಡಿಕೆ ಸಲ್ಲಿಸಿ ತೆಗೆದುಕೊಳ್ಳುವ ವ್ಯವಸ್ಥೆ ಇದೆ. ಅದಲ್ಲದೆ ಸಮಾಜ ಕಲ್ಯಾಣ ಇಲಾಖೆಯಿಂದ Commissioner ರವರ ವತಿಯಿಂದ ಭಾರತ ಸರ್ಕಾರಕ್ಕೆ ತಮ್ಮ requirement ಕಳುಹಿಸಿ ಅವರು ಪ್ರತ್ಯೇಕವಾಗಿ allotment ಕೂಡ ತರುತ್ತಿರುತ್ತಾರೆ. ಇದು ಇರತಕ್ಕಂಥ ವ್ಯವಸ್ಥೆಯಾಗಿದೆ. ಯಾವುದೇ ಕಾರಣಕ್ಕೂ ಬಡವರಿಗೆ ತೊಂದರೆಯಾಗದ ಹಾಗೆ ಸರ್ಕಾರ ನೋಡಿಕೊಳ್ಳುತ್ತದೆ. ನಿಲ್ಲಿಸುವಂಥ ಪ್ರಶ್ನೆ ಇಲ್ಲ. ಇನ್ನು ಎಲ್ಲರಿಗೂ ಬಿಪಿಎಲ್ ಕಾರ್ಡ್ ಕೊಡಬೇಕೆಂದರೆ ಅದು ಸಾಧ್ಯವಾಗುವುದಿಲ್ಲ. ಆದರೆ, ಬಡವರು ಯಾರಿದ್ದಾರೆ, ಇವತ್ತು ration card ಕೊಡತಕ್ಕಂಥದ್ದಕ್ಕೆ ಉಳಿದ ಎಲ್ಲಾ ಮಾನದಂಡಕ್ಕಿಂತಲೂ ಆದಾಯದ ಮೂಲವೇ ಇರತಕ್ಕಂಥದ್ದು. ಗ್ರಾಮೀಣ ಪ್ರದೇಶದಲ್ಲಿರತಕ್ಕಂಥವರಿಗೆ ವಾರ್ಷಿಕ ಆದಾಯ 12 ಸಾವಿರ ರೂ. ಇರಬೇಕು ಮತ್ತು ಪಟ್ಟಣ ಪ್ರದೇಶದಲ್ಲಿರತಕ್ಕಂಥವರಿಗೆ ವಾರ್ಷಿಕ 17 ಸಾವಿರ ರೂ. ಆದಾಯ ಇರಬೇಕು. ಯಾರು ಕಡುಬಡವರಿದ್ದಾರೆ ಅವರಿಗೆ ಕೊಡುವುದಕ್ಕೆ percentage ಪ್ರಶ್ನೆ ಇಲ್ಲ. ಯಾರು ಇವತ್ತು ಹೊಟ್ಟೆಗೆ ಅನ್ನವಿಲ್ಲದೇ ತೊಂದರೆ ಪಡುತ್ತಿದ್ದಾರೆ ಅಂಥವರಿಗೆ ಕೊಡಲಿಕ್ಕೆ ಸರ್ಕಾರ ಬದ್ಧವಾಗಿದೆ ಎನ್ನುವ ಮಾತನ್ನು ಬಹಳ ಸ್ಪಷ್ಟವಾಗಿ ಹೇಳುತ್ತೇನೆ ಮತ್ತು ನರ್ದೇಶನವನ್ನು ಕೂಡ ಕಳುಹಿಸಿಕೊಡುತ್ತೇನೆ.

(ಗೊಂದಲ)

ಅಧ್ಯಕ್ಷರು: ಈ ವಿಷಯವನ್ನು ಇಲ್ಲಿಗೆ ಮುಕ್ತಾಯ ಮಾಡೋಣ.

ಶ್ರೀ ಎಸ್.ರಾಜೇಂದ್ರನ್: BGML- Bharath Gold Mines ಮುಚ್ಚಿರುವುದರಿಂದ ಅಲ್ಲಿಯವರೆಗೆ ಈಗ ಕೆಲಸವೇ ಇಲ್ಲ. ಅವರಿಗೆ ತಾವು target ಇಟ್ಟುಬಿಟ್ಟರೆ ಏನು ಮಾಡುವುದು? ಅಲ್ಲಿ card ಗಳನ್ನು ಕೊಡುವುದಕ್ಕೆ ಸ್ವಲ್ಪ D.C. ಯವರಿಗೆ ಹೇಳಿ.

ಶ್ರೀ ಸಿದ್ದರಾಮಯ್ಯ: ಆಹಾರ ಸಚಿವರಾದ ನೀವು D.C. ಗಳಿಗೆ ಇಷ್ಟೇ ಮಾಡಿ ಎಂದು ಕಳುಹಿಸಿಲ್ಲ. ಆದರೆ ಇಷ್ಟು percentageಗಿಂತ ಹೆಚ್ಚಿರಬಾರದು, ಇಷ್ಟು ಲಕ್ಷ ಕಾರ್ಡುಗಳಿಗಿಂತ ಮುಂದಕ್ಕೆ ಹೋಗಬಾರದು ಎಂದು ಜಿಲ್ಲಾಧಿಕಾರಿಗಳು ಎಲ್ಲ ತಹಶೀಲ್ದಾರರುಗಳಿಗೆ ಕಳುಹಿಸಿಬಿಟ್ಟಿದ್ದಾರೆ. ಬಹಳ

ಮುಖ್ಯವಾಗಿ ಏನಾಗಿದೆ ಎಂದರೆ, ಮೊದಲು B.P.L. card ಇದ್ದವರಿಗೆ A.P.L. card ಈಗ ಸಿಕ್ಕಿಬಿಟ್ಟಿದೆ. ಅದು ದೊಡ್ಡ ಸಮಸ್ಯೆಯಾಗಿರುವಂಥದ್ದು.

ಶ್ರೀ ಗೋವಿಂದ ಎಂ.ಕಾರಜೋಳ: ಆಗಿದೆ.

ಶ್ರೀ ಸಿದ್ದರಾಮಯ್ಯ : ಇನ್ನು ಕೆಲವರಿಗೆ B.P.L. card ಹೊಸದಾಗಿ ಸಿಕ್ಕಿಲ್ಲ. ಈ ಎರಡು ಸಮಸ್ಯೆಗಳಿವೆ. ಒಂದನೆಯದು, B.P.L. card ಗೆ deserve ಆಗಿರುವವರಿಗೆ A.P.L. card ಹೊರಟುಹೋಗಿದೆ. ಅದನ್ನು ಸರಿಪಡಿಸಬೇಕಾಗಿದೆ. ಎರಡನೆಯದಾಗಿ, ಹೊಸದಾಗಿ ಕೆಲವರು B.P.L. card ತೆಗೆದುಕೊಳ್ಳುವುದಕ್ಕೆ eligible ಇದ್ದರೂ ಕೂಡ ಅವರು ಕೊಟ್ಟಿಲ್ಲ. ನೀವು ineligible ರವರನ್ನು ತೆಗೆದು ಹಾಕಿರುವುದಕ್ಕೆ ನಮ್ಮದೇನೂ ಅಭ್ಯಂತರವಿಲ್ಲ. ineligible ಅನ್ನು ತೆಗೆದು ಹಾಕಬೇಕು, ಅವರೇನು norms ಹಾಕಿಕೊಂಡಿದ್ದಾರೆ, ಆ norms ಒಳಗಡೆ ಬರದೇ ಹೋದರೆ ಅಂಥವರನ್ನು ತೆಗೆದುಹಾಕಿ ಕಡಿಮೆ ಮಾಡಲಿ. ಮೊದಲು 65 ರಿಂದ 70 ಲಕ್ಷ ಹಸಿರು ಕಾರ್ಡುಗಳಿದ್ದವು. ಈಗ ನೀವು ಕೊಟ್ಟಿರುವುದು ಸರ್ಕಾರದ ವರದಿ ಪ್ರಕಾರ, ನಿಮ್ಮ ಅಂಕಿಅಂಶಗಳ ಪ್ರಕಾರ 54 ರಿಂದ 55 ಲಕ್ಷ ಕಾರ್ಡುಗಳನ್ನು ಇಲ್ಲಿಯವರೆಗೆ ಕೊಟ್ಟಿದ್ದೀರಿ. ಈಗ A.P.L. card ಗೆ ಅಕ್ಕಿ ಬರುತ್ತಿಲ್ಲ. A.P.L. card ನವರು ಹೋಗಿ ತೆಗೆದುಕೊಂಡಾಗ ಅದಾದರೂ 9.50, 10.00 ರೂಪಾಯಿಗಳಿಗೆ ಸಿಗುತ್ತಿತ್ತು. ಈಗ ಅದೂ ಇಲ್ಲ. B.P.L. card ಸಿಗಬೇಕಾದವರಿಗೆ A.P.L. card ಸಿಕ್ಕಿದೆಯಲ್ಲಾ, ಅವರು open market ಗೆ ಹೋದರೆ ಒಂದು ಕೆ.ಜಿ.ಗೆ 15 ರೂ. 16 ರೂ. ಆಗುತ್ತದೆ. 60 ರೂಪಾಯಿಗಳಿಗೆ 20 ಕೆ.ಜಿ. ಅಕ್ಕಿ ಸಿಗುತ್ತಿದ್ದಂಥ B.P.L. card holder ಗೆ ಈಗ A.P.L. card ಸಿಕ್ಕಿರುವುದರಿಂದ ಅವರು ಕನಿಷ್ಟ 300 ರೂಪಾಯಿಗಳನ್ನು ಅಷ್ಟೇ ಅಕ್ಕಿಗೆ ಕೊಡಬೇಕಾಗುತ್ತದೆ. ಇದನ್ನು ಸರಿಪಡಿಸಬೇಕಾಗಿದೆ. ಇದು ಇವತ್ತಿನವರೆಗೂ ಆಗಿಲ್ಲ. ಕರ್ನಾಟಕದ ಎಲ್ಲಾ ಕಡೆ ನೀವೇ ಹೋಗಿ ಬನ್ನಿ. Wherever you go throughout Karnataka. ಈ complaints, ಕಗ್ಗಂಟು ಇದೆ. ಇದು set right ಆಗಬೇಕು. ಇನ್ನು unit system ಅನ್ನು ತಂದಿರುವುದರಿಂದ ಅದರ ಬಗ್ಗೆ ಜನರಲ್ಲಿ ಬಹಳ ಅಸಮಾಧಾನವಾಗಿದೆ. ಆದರೆ, ನೀವು unit system ಅನ್ನು ತಂದು ದುಡ್ಡಿನ subsidy ಅನ್ನು ಕಡಿಮೆ ಮಾಡಬೇಕೆನ್ನುವ ವಿಚಾರವನ್ನು ಮಾಡಿದ್ದೀರಿ. 750 ಕೋಟಿ ರೂಪಾಯಿಗಳು ಇದ್ದುದ್ದನ್ನು 700 ಕೋಟಿ ರೂಪಾಯಿಗಳಿಗೆ subsidy ಇಳಿಸುವುದಕ್ಕೆ ಹೊರಟ್ಟಿದೀರಿ. subsidy ಕಡಿಮೆ ಮಾಡಿ ಉಳಿಸಿಕೊಳ್ಳುವುದಕ್ಕೆ ಹೋಗಿದ್ದೀರಿ. ಈ subsidy ಅನ್ನು ಕಡಿಮೆ

ಮಾಡುವ ದೃಷ್ಟಿಕೋನವನ್ನು ಇಟ್ಟುಕೊಂಡು ಬಡವರಿಗೆ ಕೊಡುವ ಈ ಕಾರ್ಯಕ್ರಮವನ್ನು ಬಡವರಿಗೆ ತೊಂದರೆಯಾಗದಿರುವ ರೀತಿಯಲ್ಲಿ ನೋಡಿಕೊಳ್ಳಬೇಕದುದು ನಿಮ್ಮ ಜವಾಬ್ದಾರಿ. ಆ ಕೆಲಸವನ್ನು ನೀವು ಮಾಡಬೇಕು, ಇನ್ನು ಜಿಲ್ಲಾಧಿಕಾರಿಗಳು ಯಾರ್ಯಾರು circular ಕಳುಹಿಸಿಕೊಟ್ಟಿದ್ದಾರೆ, ಆ circular ಗಳನ್ನೆಲ್ಲ ವಾಪಸ್ಸು ತರಿಸಿಕೊಳ್ಳಬೇಕು. 75% ಕೊಡಿ, 80% ಕೊಡಿ, 100% ಕೊಡಿ ಎಂದು ನಾವು ಹೇಳುವುದಿಲ್ಲ. ಈಗ ಕೇಂದ್ರ ಸರ್ಕಾರದವರು ಹೇಳಿದಷ್ಟು ನೀವು ಕೊಡುವುದಕ್ಕಾಗುವುದಿಲ್ಲ. ಕೇಂದ್ರ ಸರ್ಕಾರ 33% ಗಿಂತ ಹೆಚ್ಚಿಗೆ ಕೊಡಬೇಡಿ ಎಂದು ಹೇಳಿದೆ. ಅಷ್ಟಕ್ಕೆ ಮಾತ್ರ ಕೊಡುವುದಕ್ಕಾಗುತ್ತದೆಯೇ? ಇದು State Governmentನ ಜವಾಬ್ದಾರಿ. ಪಟ್ಟಣದಲ್ಲಿ 17 ಸಾವಿರ ವಾರ್ಷಿಕ ಆದಾಯ ಮತ್ತು ಗ್ರಾಮದಲ್ಲಿ 12 ಸಾವಿರ ಆದಾಯ ಇರಬೇಕೆಂದು ಮಾಡಿದ್ದೀರಿ. ಅದರೊಳಗಡೆ ಸ್ವಲ್ಪ ಆ ಕಡೆ ಈ ಕಡೆ 1 ಸಾವಿರ ಅಥವಾ 500 ರೂ.ಗಳನ್ನು ಮಾಡಬಹುದು. ನೀವು ತೀರಾ ಅನುಕೂಲಸ್ಥರಿಗೆ ಕೊಡಿ ಎಂದು ನಾವ್ಯಾರೂ ಹೇಳುವುದಿಲ್ಲ. ಆದರೆ, ನಿಜವಾದಂಥ ಬಡವರಿಗೆ ತಪ್ಪಿಹೋಗಬಾರದು. ಯಾವನೋ ಒಬ್ಬ ಅನುಕೂಲಸ್ಥನಿಗೆ ಸಿಕ್ಕಿಬಿಟ್ಟರೆ ಅದೇನೂ ಆಕಾಶ ಕೆಳಗೇನೂ ಆಗುವುದಿಲ್ಲ. ಆದರೆ ನಿಜವಾದ ಬಡವ ಯಾರಿದ್ದಾರೆ, ಅವರಿಗೆ ತಪ್ಪಿಹೋಗಬಾರದೆನ್ನುವುದು ಉದ್ದೇಶ.

ಅಧ್ಯಕ್ಷರು: ಇದರ ಬಗ್ಗೆ ಎಲ್ಲರೂ Clarification ಕೇಳುವುದಕ್ಕೆ ಅವಕಾಶ ಕೊಡಬಹುದು. ಆದರೆ ಸಮಯವಿಲ್ಲ.

ಶ್ರೀ ಎನ್. ಧರ್ಮಸಿಂಗ್ (ವಿರೋಧ ಪಕ್ಷದ ನಾಯಕರು) ಮಾನ್ಯ ಅಧ್ಯಕ್ಷರೇ, ಕೊಡಗು, ಹಾಸನ ಚಿಕ್ಕಮಗಳೂರು ಜಿಲ್ಲೆ ಇದೆ. ಅಲ್ಲಿಯ Coffee plantaionನಲ್ಲಿಯ Workers ಏನಿದ್ದಾರೆ, Trade union leaders ನನಗೆ ಭೇಟಿ ಮಾಡಿದ್ದರು. ಅವರಿಗೆ B.P.L. card ಕೊಡುತ್ತಿಲ್ಲ. ಕೊಡಗು, ಹಾಸನ ಚಿಕ್ಕಮಗಳೂರು ಜಿಲ್ಲೆಯಲ್ಲಿ Naxalite activites ನಡೆಯುತ್ತಿದೆ. Naxalite activites ಗೆ ನೀವು ಹೊಡೆಯಿರಿ, ರಕ್ಷಣೆ ದೃಷ್ಟಿಯಿಂದ ಬೇಕಾದ್ದನ್ನು ಮಾಡಿ. ಆದರೆ ಇವತ್ತು Socio economic problem ಇದೆ. ಅಲ್ಲಿರುವ ಬಡವರಿಗೆ Coffee plantaion ನಲ್ಲಿ ಕೆಲಸ ಮಾಡುವ ಜನರನ್ನು You have to identify. ಇವತ್ತು ನೀವು ಹಾಸನ ಜಿಲ್ಲಾಧಿಕಾರಿಗಳಿಗೆ, ಚಿಕ್ಕಮಗಳೂರು ಜಿಲ್ಲಾಧಿಕಾರಿಗಳಿಗೆ ಯಾರು Cofee plantaion ನ Workers ಇದ್ದಾರೆ, Workers ಗೆ 70ರೂ ಮಾತ್ರ ಸಿಗುತ್ತದೆ. ಅವರಿಗೆ B.P.L. card ಕೊಡುತ್ತಿಲ್ಲ. ಅದಕ್ಕೆ ಮೊನ್ನೆ ಡಿ.ಬಿ. ಚಂದ್ರೇಗೌಡರು ಎಲ್ಲರನ್ನು ಕಾರ್ಮಿಕ ಮುಖಂಡರು ಬಂದು

ಭೇಟಿಯಾಗಿದ್ದರು. ಇದರ ಬಗ್ಗೆ ಶೂನ್ಯ ವೇಳೆಯಲ್ಲಿ ಚರ್ಚೆ ಮಾಡೋಣವೆಂದರೆ ಅವಕಾಶ ಸಿಗದೆ, ಆ ನೋಟಿಸ್ ನಿಮ್ಮ ಬಳಿಯೇ ಇದೆ. ಅದಕ್ಕಾಗಿ ಇವತ್ತು ಕಾರಜೋಳರವರ ಹತ್ತಿರ ಕೇಳಿಕೊಳ್ಳುವುದೇನೆಂದರೆ, ಅದರ ಬಗ್ಗೆ ಸಹ ನಗಾವಹಿಸಬೇಕು. ಕರ್ನಾಟಕ ರಾಜ್ಯದಲ್ಲಿರುವ ಬಡವರ ಬಗ್ಗೆ ಬಡತನ ರೇಖೆಗಿಂತ ಕೆಳಗಿರುವ ಜನರ ಬಗ್ಗೆ ಯಾವ ರೀತಿಯಾಗಿ ದೇವರಾಜು ಅರಸುರವರು ಕರ್ನಾಟಕ ರಾಜ್ಯದ ಮುಖ್ಯಮಂತ್ರಿಯಾಗಿ ಮೊದಲ ಬಾರಿಗೆ ಬಡತನ ರೇಖೆಯ ಕೆಳಗಿರುವವರಿಗೆ. ಕೊಡತಕ್ಕಂಥ ಕಾರ್ಯ ಏನು ಮಾಡಿದ್ದಾರೆ, ಹಾಗೆಯೇ ಕಾರಜೋಳರವರು ಕೂಡ ಮಾಡಬೇಕು. ನಮ್ಮ ಬಿಜೆಪಿಯ ಅಜೆಂಡಾವನ್ನು ಬೇರೆ ಕಡೆಗೆ ಇಡಿ. ಆದರೆ ಈ ಪರಿಶಿಷ್ಟ ಜಾತಿ,ಪರಿಶಿಷ್ಟ ಪಂಗಡಕ್ಕೆ ಸಂಬಂಧಪಟ್ಟವರಿದ್ದೀರಿ. ಇದು Ration card ಕೊಡುವ ವಿಚಾರವಾಗಿದೆ. ಎಲ್ಲಾ ಬಡಜನರ ಹೊಟ್ಟೆಗೆ ಅನ್ನ ಕೊಡುವ ರೀತಿಯಲ್ಲಿ ತಲುಪಿಸಬೇಕು. ಆ ರೀತಿ ಕೆಲಸ ಮಾಡಬೇಕು, Coffee plantaion Workers ಬಗ್ಗೆ ವಿಶೇಷವಾದ ಒಂದು ಸುತ್ತೋಲೆಯನ್ನು ತಾವು ಹೊರಡಿಸಬೇಕು. ಆ ಬಗ್ಗೆ ಸಂಬಂಧಪಟ್ಟ D.C.ಯವರಿಗೆ ಹೇಳಬೇಕು ಮತ್ತು ಅವರಿಗೆ identify ಮಾಡಿ card ಕೊಡುವ ಕೆಲಸವನ್ನು ಮಾಡಬೇಕು.

ಶ್ರೀ ಎ. ಕೃಷ್ಣಪ್ಪ: ಮಾನ್ಯ ಅಧ್ಯಕ್ಷರೇ, small clarification city limites ನಲ್ಲಿ ಮಹಾನಗರ ಪಾಲಿಕೆಯ limits ನಲ್ಲಿ declared slums,undeclared slums ಇವೆ. ಈಗ ನಿಮ್ಮಲ್ಲಿ Survey ಮಾಡಿದಾಗ ಬಹಳ ಕಡೆ ಕಡುಬಡವರು ಯಾರಿದ್ದಾರೆ, ಕೂಲಿಕಾರರು ಇದ್ದಾರೆ ಅವರಿಗೆ undeclared slums ನಲ್ಲಿ ವಾಸಮಾಡುವ ಜನಗಳದು ಸಂಪೂರ್ಣವಾಗಿ ಕೈಬಿಟ್ಟುಹೋಗಿದೆ. ಅದನ್ನು Coverage ಮಾಡಬೇಕಿದೆ ಏಕೆಂದರೆ ಬಡತನ ಎನ್ನುವುದು ಒಂದು ನಮಗೆ parameter. ಆ parameter ಆರ್ಹರಿರುವರು ಗೋಮಾಳಗಳಲ್ಲಿ ಕಟ್ಟಿಕೊಂಡಿದ್ದಾರೆ, ಗುಂಡು ತೋಪುಗಳಲ್ಲಿ ಕಟ್ಟಿಕೊಂಡಿದ್ದಾರೆ, ಸ್ಮಶಾನಗಳಲ್ಲಿ ಕಟ್ಟಿಕೊಂಡಿದ್ದಾರೆ, ಈ multi storied building ಗಳ ಕೆಲಸ ನಡೆಯುವ ಜಾಗದಲ್ಲಿ ನಿಮ್ಮ ಜಿಲ್ಲೆಗಳವರೇ ಜಾಸ್ತಿ ಇರುವುದು. ಅಂಥ ಕಡು ಬಡವರು ಯಾರಿದ್ದಾರೆ, ಅವರಿಗೆ card ಸಿಗಲಿಕ್ಕೆ ನಿಮ್ಮವರು declared slums ನಲ್ಲಿಯೇ ಹೋಗಿ Survey ಮಾಡಿಕೊಡುತ್ತೇವೆಂದು ಹೇಳಿದರೆ, ಮಿಕ್ಕವರು ಹೊಟೆಗೆ ಅನ್ನ ತಿನ್ನಬಾರದೆಂದು ಉದ್ದೇಶವೇ? ಹಿಂದೆ ಶ್ರೀಮಾನ್ ರಾಮಲಿಂಗಾರೆಡ್ಡಿಯವರು minister ಆಗಿದ್ದಾಗ ನಾವು insist ಮಾಡಿ ಇದನ್ನು ಜಾರಿ ಮಾಡಿಸಿದ್ದೆವು. ಅದಕ್ಕೆ ನೀವು ಇದೊಂದು amendment ಮಾಡಬೇಕು. Survey ಮಾಡಿ ಕಡುಬಡವರು ಯಾರಿದ್ದಾರೆ, ಅವರಿಗೆ ಕೊಡಿಸಿರಿವಂತರಿಗೆ ನಾವೇನೂ advocacy ಮಾಡುತ್ತಿಲ್ಲ.

ಶ್ರೀ ಗೋವಿಂದ ಎಂ. ಕಾರಜೋಳ: ರಾಜ್ಯದಲ್ಲಿ ಸುಮಾರು 70 ಲಕ್ಷ ಕಾರ್ಡುಗಳನ್ನು ಕೊಟ್ಟಿದ್ದೇವೆ. ಹಿಂದಿನ ಸಮಾಜ ಕಲ್ಯಾಣ ಸಚಿವರು ಹೇಳಿದಂತೆ declared, undeclared slums ಎಂದು ಆ ರೀತಿ ಸರ್ಕಾರ ಮಾಡಿಲ್ಲ. ಯಾರು ಬಡವರಿದ್ದಾರೆ ಅವರಿಗೆ ಕಾರ್ಡು ಕೊಡಬೇಕೆಂದು ಹೇಳಿದ್ದೇವೆ. ಯಾರ್ಯಾರು ಬಡವರಿದ್ದಾರೆ, ಅವರೆಲ್ಲರೂ ಅರ್ಜಿಗಳನ್ನು ಕೊಡಬಹುದೆಂದು 56 ಕೇಂದ್ರಗಳನ್ನು ಪ್ರಾರಂಭ ಮಾಡಿ ಹೇಳಿದ್ದೇವೆ. ಬೆಂಗಳೂರಿನಲ್ಲಿ 56 ಕೇಂದ್ರಗಳನ್ನು ಪ್ರಾರಂಭ ಮಾಡಿದ ನಂತರ, ಈಗ 6 ಲಕ್ಷದ 20 ಸಾವಿರ ಹೊಸ ಅರ್ಜಿಗಳ ಬಂದಿವೆ. ಅವುಗಳ ಪರಿಶೀಲನೆ ನಡೆದಿದೆ. ಆದಷ್ಟು ಬೇಗನೆ ಅವರಿಗೂ ಕೂಡ ಕೊಡಲಿಕ್ಕೆ ವ್ಯವಸ್ಥೆಯನ್ನು ಮಾಡುತ್ತೇವೆ. ಬಡವರಿಗೆ ಕೊಡಬಾರದೆಂದು ನಾವು ಹೇಳಿಲ್ಲ. ಮಾನ್ಯ ಸಿದ್ದರಾಮಯ್ಯನವರು ಹೇಳಿದಂಥ ವಿಚಾರಕ್ಕೆ ಸಂಬಂಧಿಸಿದಂತೆ ಇವತ್ತು ಕಾಫಿ ಪ್ಲಾಂಟರ್ಸ್‌ಗೆ ಕೊಟ್ಟಿಲ್ಲ, Planter ನಲ್ಲಿ ಕೆಲಸ ಮಾಡತಕ್ಕಂಥವರಿಗೆ ಕೊಟ್ಟಿಲ್ಲವೆಂದು ಮಾನ್ಯ ವಿರೋಧ ಪಕ್ಷದ ನಾಯಕರು ಹೇಳಿದರು. ಕಾಫಿ ತೋಟದಲ್ಲಿ ಕೆಲಸ ಮಾಡುವವರಿಗೆ ಕೊಟ್ಟಿಲ್ಲವೆಂದರು. ಯಾರ ಆದಾಯ ಕಡಿಮೆ ಇದೆ, ಯಾರು ಬಡವರಿದ್ದಾರೆ, ಪಡೆಯಲಿಕ್ಕೆ ಯಾರಿಗೆ ಅರ್ಹತೆ ಇದೆ, ಅಂಥವರಿಗೆಲ್ಲರಿಗೂ ಕೊಡಲಿಕ್ಕೆ ಇವತ್ತು ನಾನು ಸೂಚನೆಯನ್ನು ಕೊಡುತ್ತೇನೆ. ಕೂಲಿ ಕಾರ್ಮಿಕರು, ಕಾಫಿ ತೋಟದಲ್ಲಿ ಕೆಲಸ ಮಾಡತಕ್ಕಂಥವರಿಗೂ ಕೂಡ .(ಗೊಂದಲ)

ಅಧ್ಯಕ್ಷರು: ಎಲ್ಲ ಕುಳಿತುಕೊಳ್ಳಿ. ಇದರ ಬಗ್ಗೆ ಎಲ್ಲ Clarification ಕೇಳುತ್ತಾ ಹೋದರೆ ಎಷ್ಟು ಹೊತ್ತಾಗುತ್ತದೆ?

ಶ್ರೀ ಎಸ್.ಎಲ್. ಧರ್ಮೇಗೌಡ: ಕಾರ್ಮಿಕರಿಗೆ ಕಡ್ಡಾಯವಾಗಿ ಕಾರ್ಡ್ ಕೊಡಲೇಬೇಕಾಗುತ್ತದೆ. Per day 70 ರೂಪಾಯಿ ಆದಾಯ ಬಂದಾಗ ಕೊಡಲಿಕ್ಕೆ ಬರುವುದಿಲ್ಲ ಎಂದು ಸಂಬಂಧಪಟ್ಟ ಅಧಿಕಾರಿಗಳು ಹೇಳುತ್ತಿದ್ದಾರೆ. ಇಲ್ಲಿ ನಿರ್ದಾಕ್ಷಿಣ್ಯವಾಗಿ ಹೇಳಬೇಕಾಗುತ್ತದೆ. Daily 70 ರೂಪಾಯಿ ಕೂಲಿ ಕೊಟ್ಟರೆ, ಅವರು ಬಡತನ ರೇಖೆಯಲ್ಲಿ ಬರುವುದಿಲ್ಲ, ಅವರಿಗೆ ಕಾರ್ಡ್ ಕೊಡುವುದಕ್ಕೆ ಬರುವುದಿಲ್ಲವೆಂದು ಅಲ್ಲಿ ನಿಮ್ಮ ಅಧಿಕಾರಿಗಳು ಹೇಳುತ್ತಾರೆ. ಕೊನೆಗೂ, ಹಳ್ಳಿಗಳಲ್ಲಿ, ಶೇ.90 ಭಾಗದಷ್ಟು ಬಡತನ ರೇಖೆಯಲ್ಲಿರುವವರನ್ನು ಈಗಾಗಲೇ ಗುರುತಿಸಿಯಾಗಿದೆ, ಅವರಿಗೆ ಪೂರ್ತಿ ಕಾರ್ಡ್ ಕೊಟ್ಟಿದ್ದೇವೆ, ಇವರಿಗೆ ಕಾರ್ಡ್ ಕೊಡುವುದಕ್ಕಾಗುವುದಿಲ್ಲವೆಂದು ಹೇಳುತ್ತಾರೆ. ಕಾರ್ಡ್ ಕೊಡುವುದರಲ್ಲಿ ಅವರ ಮಾಪನವೇನಿದೆ, ಅದರಲ್ಲಿ ಅವರು ತಪ್ಪಾಗಿ

ಮಾಡಿದ್ದಾರೆ. ಯಾರು ಕಡು ಬಡವರಿದ್ದಾರೆ, ಅವರಿಗೆ ಕೊಡಲೇಬೇಕಾಗುತ್ತದೆ. ದಯವಿಟ್ಟು ಅದನ್ನು ಪರಿಶೀಲನೆ ಮಾಡಬೇಕು ಮತ್ತು ಸಂಬಂಧಪಟ್ಟ ಅಧಿಕಾರಿಗಳಿಗೆ ಆದೇಶ ಕೊಡಬೇಕು.

ಅಧ್ಯಕ್ಷರು: ಉತ್ತರ ಹೇಳಿ. ಗೌಡರೆ ಎಲ್ಲ ಕೇಳುತ್ತಾರೆ.

ಶ್ರೀ ಸಿ.ಎಸ್.ಪುಟ್ಟೇಗೌಡ: ಒಂದು ಸಣ್ಣ Clarification ಇದೆ.

ಅಧ್ಯಕ್ಷರು: ಇನ್ನೂ ಬೇರೆ ಬೇರೆ subjects ಇವೆ. ಕೇಳಿ.

ಶ್ರೀ ಸಿ.ಎಸ್.ಪುಟ್ಟೇಗೌಡ: ಮೊದಲು School ಮಕ್ಕಳಿಗೆಲ್ಲ ರೇಷನ್ ಕೊಡುತ್ತಿದ್ದರು. ಈಗ ಅಡುಗೆ ಮಾಡಿ ಎಂದು 1000, 1200 ಮಕ್ಕಳಿರುವ ಶಾಲೆಯಲ್ಲಿ ದಿನ ಮದುವೆಯಾಗುತ್ತಿದೆ. ಅದು practically ಹಾಗಿಲ್ಲ. ಅದರ ಬದಲು ಮನೆಗೆ ರೇಷನ್ ಕೊಟ್ಟರೆ ಒಳ್ಳೆಯದು. ಇಲ್ಲದಿದ್ದರೆ, ಅಲ್ಲಿ ಪಾಠವೂ ನಡೆಯುತ್ತಿಲ್ಲ. ಪ್ರತಿ School ನಲ್ಲಿ, ಪ್ರತಿ ದಿನ ಮದುವೆ ಮಾಡಿದ ಹಾಗಾಗುತ್ತಿದೆ. ಒಗ್ಗರಣೆ ಹಾಕುವುದು, ಅಕ್ಕಿ ಹಂಚುವುದು, ಗ್ಯಾಸ್ ಹಂಚುವುದು ಇದೇ ಆಗಿದೆ. ದಯಮಾಡಿ, ಇದಕ್ಕೆನಾದರೂ ಪರಿಹಾರ ಹುಡಕಿ. High School ಮಕ್ಕಳಿಗೆ ಅಡುಗೆ ಮಾಡುವುದಕ್ಕೆ ಮೇಡಂರಿಂದ ಖಂಡಿತ ಆಗುವುದಿಲ್ಲ.

(ಗೊಂದಲ)

ಶ್ರೀ ಹೆಚ್.ಡಿ.ಬಸವರಾಜ್: ಮಾನ್ಯ ಅಧ್ಯಕ್ಷರೇ .

ಅಧ್ಯಕ್ಷರು: ಆಯಿತು. ಎಷ್ಟೂ ಎಂದು ಕೇಳುತ್ತೀರಿ? ಈಗ ಮುಖ್ಯಮಂತ್ರಿಗಳಿಂದ ಉತ್ತರವಾಗಬೇಕು. ಇನ್ನೂ ಬೇರೆ ಬೇರೆ subjects ಇವೆ. ಕೊನೆಗೆ ಇದೊಂದೆ ಇರುವುದೇ?

ಶ್ರೀ ಹೆಚ್.ಡಿ.ಬಸವರಾಜ್: ಎರಡೇ ಎರಡು ಪ್ರಶ್ನೆಗಳಿವೆ.

ಅಧ್ಯಕ್ಷರು: ಯಾರನ್ನು control ಮಾಡುವುದು? ಹೇಗೆ control ಮಾಡುವುದು? ಎಲ್ಲ constituency ಗಳಲ್ಲಿಯೂ ಸಮಸ್ಯೆ ಇದೆ. ಮಂತ್ರಿಗಳೇ, ನೀವು ಉತ್ತರ ಕೊಡಿ.

ಶ್ರೀ ಹೆಚ್.ಡಿ.ಬಸವರಾಜ್: ಕೊಡಗಿನ ಸಮಸ್ಯೆ ಬಗ್ಗೆ ಉತ್ತರ ಹೇಳಿಬಿಡಿ.

ಅಧ್ಯಕ್ಷರು: ಬೇರೆ ಬೇರೆ subjects ಇವೆ.

ಶ್ರೀ ಹೆಚ್.ಡಿ.ಬಸವರಾಜ್: ಕಾಫಿ ತೋಟದಲ್ಲಿ ಕೃಷಿ ಮಾಡುವಂಥಹ ಕಾರ್ಮಿಕರಿಗೆ ಬಿಪಿಎಲ್ ಕಾರ್ಡ್ ಒದಗಿಸುವಂಥದ್ದನ್ನು ತಾವು ಮಾಡಬೇಕೆಂದು ನಾನು ಕೇಳಿಕೊಳ್ಳುತ್ತಿದ್ದೇನೆ.

ಶ್ರೀ ಡಿ.ಆರ್.ಪಾಟೀಲ್: SC families ಗೆ ಕೊಟ್ಟಿಲ್ಲ. ಅವರು landless ಆಗಿದ್ದಾರೆ. ನೀವು Food Inspecter ಗೆ order ಮಾಡಿದ್ದಿರಿ. ಅವರೇನೂ ಕೆಲಸ ಮಾಡಲಿಲ್ಲ. ಹೊಸಳ್ಳಿ ಗ್ರಾಮದೊಳಗೆ

ಅಧ್ಯಕ್ಷರು: ನೀವು ಯಾವುದೋ ಒಂದು ಗ್ರಾಮ ಹೇಳತ್ತೀರಿ. ಇಡೀ ರಾಜ್ಯದಲ್ಲಿ ಹಾಗಾಗಿದೆ.

ಶ್ರೀ ಡಿ.ಆರ್.ಪಾಟೀಲ್: ಅವರಿಗೆ ಗೊತ್ತಿದೆ. ಗದಗ ತಾಲ್ಲೂಕು ಹೊಸಳ್ಳಿ ಗ್ರಾಮದಲ್ಲಿ SC.'s families, landless ಆಗಿದ್ದು, ಇಂಥವರಿಗೆ, ಎಲ್ಲರಿಗೂ ಕೊಡಬೇಕೆಂದು ನೀವು ಹೇಳಿ.

ಅಧ್ಯಕ್ಷರು: ಎಲ್ಲರಿಗೂ ಯಾರೂ ಕೊಡುವುದಕ್ಕೂ ಸಾಧ್ಯವಾಗುವುದಿಲ್ಲ. ಇದೊಂದು ಗಂಭೀರವಾದ ಸಮಸ್ಯೆ. ಅಲ್ಲೇನಾಗುತ್ತದೆಂದರೆ, play to the gallery ಎನ್ನುತ್ತಾರಲ್ಲ, ಅಲ್ಲಿ ನಮ್ಮ ತಾಲ್ಲೂಕು ಪಂಚಾಯಿತಿಯವರು, ಪಂಚಾಯಿತಿಯವರು ಇವರಿಗೂ ಕೊಡಿ, ಅವರಿಗೂ ಕೊಡಿ ಎಂದು ಹೇಳುತ್ತಾರೆ. ಹಾಗಾದರೆ, 100 ಅಲ್ಲ 150% ಗೆ ಹೋಗುತ್ತದೆ. ಈಗ ನಿಜವಾಗಿ 65%, 70% ಕುಟುಂಬಗಳಿಗೆ ಮಾಡಬೇಕಾಗುತ್ತದೆ. ಏನಾದರೂ ಆಗಿದ್ದರೆ, ನೀವು ಮೇಲ್ಗಡೆಯವರನ್ನು ಕಿತ್ತು ಹಾಕಿ. ಕೆಳಗಡೆಯವರನ್ನು ಕಿತ್ತು ಹಾಕಬೇಡಿ. ಅಲ್ಲೇನಾಗಿದೆ ಎಂದರೆ ಯಾರು ಪ್ರಭಾವಿಗಳಿರುತ್ತಾರೆ, ಅವರು Village Accountant ಪಂಚಾಯಿತಿ Secretary ಗಳ ಮೇಲೆ ಪ್ರಭಾವ ಬೀರುತ್ತಾರೆ. ಆದ್ದರಿಂದ ಅವರು ಮೇಲ್ಗಡೆಯವರನ್ನು ಬಿಟ್ಟಿಲ್ಲ. ಕೆಳಗಡೆಯವರನ್ನು ಕಿತ್ತು ಹಾಕುತ್ತಾರೆ. ಆದ್ದರಿಂದ, ಇದಕೊಂದೇ ಒಂದು ದಾರಿ ಎಂದರೆ, ತಹಶೀಲ್ದಾರ್ ಮತ್ತು ಆ Reveunue Inspecter, Village Accountant ರವರ ಮೇಲೆ, ಹತ್ತು ಜನರ ಮೇಲೆ ಕ್ರಮ ತೆಗೆದುಕೊಳ್ಳಿ. ಆಗ ಸರಿ ಹೋಗುತ್ತದೆ. ಅದು ಬಿಟ್ಟು, ಇವೆಲ್ಲ ಮಾಡುವುದಕ್ಕಾಗುವುದಿಲ್ಲ. ಸರಿಯಾಗಿ ಹೇಳಿ. ಸುಮ್ಮನೆ ಹೇಳುತ್ತಿದ್ದರೆ, ಹಾಗಿದ್ದರೆ ಎಲ್ಲರಿಗೂ ಕೊಟ್ಟುಬಿಡಿ.

ಶ್ರೀ ಗೋವಿಂದ ಎಂ. ಕಾರಜೋಳ: ಈಗಾಗಲೇ 47 ಜನರನ್ನು suspend ಮಾಡಿದ್ದೇವೆ. ನನ್ನ ಇಲಾಖೆ ಬಹಳ ಸಣ್ಣ ಇಲಾಖೆ. 79 ಜನರ ಮೇಲೆ ಇವತ್ತು enquiries , ಅವರಿಗೆ Notice ಕೊಡುವುದು, disciplinary

proceedings start ಮಾಡಿದ್ದೇವೆ. ಆದರೆ, ಇಷ್ಟಕ್ಕೇ ಈ ಸಮಸ್ಯೆ ಬಗ್ಗೆ ಹರಿಯುವುದಿಲ್ಲ. ಜನರೂ ಕೂಡ ಸ್ವಲ್ಪ ಎಚ್ಚೆತ್ತುಕೊಂಡು ಇರಬೇಕಾಗುತ್ತದೆ. ಇವತ್ತು ಗ್ರಾಮಸಭೆಯಲ್ಲಿಟ್ಟು ಅರ್ಹರ ಪಟ್ಟಿಯನ್ನು ಗ್ರಾಮಸಭೆಯಲ್ಲಿ ಓದಿ, ಜನರಿಗೆ ತಿಳಿಸಿ, ನೋಟೀಸ್ ಬೋರ್ಡ್‌ಗೆ ಹಾಕಿ, ಅನುಮೋದನೆ ಮಾಡಿ ಕಳಹಿಸಿ ಎಂದು ಗ್ರಾಮ ಪಂಚಾಯಿತಿಗಳಿಗೆ ಹೇಳಿದರೆ, ಗ್ರಾಮ ಪಂಚಾಯಿತಿಯವರು ಯಾರೂ ಆ ಕೆಲಸ ಮಾಡಲಾರದೇ, approved ಎಂದು seal ಹಾಕಿ ಕಳುಹಿಸಿಬಿಟ್ಟಿದ್ದಾರೆ. ಮತ್ತೆ, ಮಾಡಬೇಕಲ್ಲ?

ಅಧ್ಯಕ್ಷರು: ಗ್ರಾಮ ಸಭೆ ಇದೆಯಲ್ಲ ಅವು ಧೃತರಾಷ್ಟ್ರರ ಸಭೆಗಳಾಗಿವೆ. ನಾನೂ ಸಹ ಎಲ್ಲ ಕಡೆ ಗ್ರಾಮ ಸಭೆ ಮಾಡಿದ್ದೇನೆ. ಆಗ, ಸ್ವಾಮಿ, ಎಲ್ಲರಿಗೂ ದೊಡ್ಡವರಿಗೇ ಕೊಟ್ಟಿದ್ದಾರೆಂದು ಹೇಳುತ್ತಾರೆ. ಯಾರಾದರೂ ದೊಡ್ಡವರ ಇಬ್ಬರ ಹೆಸರು ಹೇಳಿ ಎಂದು ನಾನು ಅನೇಕ ಸಭೆಗಳಲ್ಲಿ ಕೇಳಿದ್ದೇನೆ, ಯಾರೂ ಹೇಳುವುದಿಲ್ಲ. ಇವತ್ತೇನಾಗಿದೆ ಎಂದರೆ, ನಮ್ಮ ಜನ ಆ ತರಹ ಆಗಿಬಿಟ್ಟಿದ್ದಾರೆ. ಆದರೆ ನಮ್ಮ ಅಧಿಕಾರಿಗಳಿಗೆ ಕಟ್ಟುನಿಟ್ಟಾಗಿ ಸೂಚನೆ ಕೊಟ್ಟು ಅವರು ಕೆಲಸ ಮಾಡಬೇಕು. ಅವರ ತಪ್ಪಿದ್ದರೆ ಅವರಿಗೆ ಶಿಕ್ಷೆ ವಿಧಿಸಬೇಕು. ಹಾಗಾದರೆ ಮಾತ್ರ ಕೊಡುವುದಕ್ಕೆ ಸಾಧ್ಯವಾಗುತ್ತದೆ. ಇಲ್ಲದಿದ್ದರೆ ಆಗುವುದಿಲ್ಲ.

ಶ್ರೀ ಗೋವಿಂದ ಎಂ. ಕಾರಜೋಳ: ಯಾರು ಬಿಟ್ಟು ಹೋಗಿದ್ದಾರೆ, ಯಾರು ಅರ್ಹತೆ ಇದ್ದವರು ಇದ್ದಾರೆ, ಅಂಥವರಿಗೆ ಕೊಡತಕ್ಕಂಥ ವ್ಯವಸ್ಥೆ ಮಾಡುತ್ತೇವೆಂದು ಬಹಳ ಸ್ಪಷ್ಟವಾಗಿ ಹೇಳಿದ್ದೇವೆ. ಈಗಾಗಲೇ ಸರ್ಕಾರದಿಂದ ಮುಖ್ಯ ಕಾರ್ಯದರ್ಶಿಗಳ ಕಡೆಯಿಂದ ಎಲ್ಲ ಜಿಲ್ಲಾಧಿಕಾರಿಗಳಿಗೆ D.O. letter ಬರೇಸಿದ್ದೇನೆ. ಅದಷ್ಟು ಬೇಗನೇ ಕೊಡತಕ್ಕಂಥ ವ್ಯವಸ್ಥೆಯನ್ನು ಮಾಡುತ್ತೇನೆ. ನವೆಂಬರ್ 1985ರಿಂದ ವ್ಯವಸ್ಥೆ ಪ್ರಾರಂಭವಾಯಿತು. ಅಂದಿನಿಂದ ಇವತ್ತಿನವರೆಗೂ ಯಾವ ಊರಿನಲ್ಲಿಯೂ ನನಗೆ ಕಾರ್ಡ್ ಸಿಕ್ಕಿದೆ ಎಂದು ಯಾರೂ ಹೇಳುವುದೇ ಇಲ್ಲ. ಕಿಸೆಯೊಳಗೆ ಕಾರ್ಡ್ ಇಟ್ಟುಕೊಂಡಿರುತ್ತಾರೆ. ಮತ್ತೊಂದು ಬೇಕೆಂದು ಕೈಚಾಚುತ್ತಾರೆ. ಒಂದೊಂದು ಕಡೆ, ನನ್ನ ಕ್ಷೇತ್ರದಲ್ಲಿಯೇ ಒಂದು function ನಡೆದಾಗ, ಒಬ್ಬ ಹೆಣ್ಣು ಮಗಳು ಬಂದು ಬಹಳ ಗಲಾಟೆ ಮಾಡಿದಳು. ಹೋಗಿ ಚೆಕ್ ಮಾಡಿದರೆ, ಅವರ ಮನೆಯಲ್ಲಿ ಮೂರು ಕಾರ್ಡ್‌ಗಳಿವೆ. ನಾಲ್ಕು ಮಕ್ಕಳಿದ್ದಾರೆ ಇನ್ನೊಂದು ಕಾರ್ಡ್ ಬೇಕೆಂದು ಹೇಳಿದಳು. ಅಂದರೆ, ಪ್ರತಿಯೊಬ್ಬರಿಗೂ ಒಂದೊಂದು ಕಾರ್ಡ್ ಕೊಡಬೇಕೆಂದರೆ ಸಾಧ್ಯವಾಗುವುದಿಲ್ಲ. ಪ್ರತಿ ಕುಟುಂಬಕ್ಕೂ ಕಾರ್ಡ್ ಕೊಡಬೇಕೆಂಬುದೇ ಇದರ concept

ಇರತಕ್ಕಂಥದ್ದಾಗಿದೆ. ಆ ರೀತಿಯಾಗಿ ಕೊಡತಕ್ಕಂಥ ವ್ಯವಸ್ಥೆಯನ್ನು ಸರ್ಕಾರ ಮಾಡಲಿಕ್ಕೆ ಬದ್ಧವಾಗಿದೆ.

(ಗೊಂದಲ)

ಶ್ರೀ ಹೆಚ್.ಡಿ.ಬಸವರಾಜ್: ನಾನು ಒಂದೇ ಒಂದು ಪ್ರಶ್ನೆ ಕೇಳುತ್ತೇನೆ.

ಅಧ್ಯಕ್ಷರು:ಕೇಳಿ. ಪ್ರಶ್ನೆ ಪ್ರಶ್ನೆಯಾಗಿಯೇ ಉಳಿದುಕೊಳ್ಳುತ್ತದೆ.

ಶ್ರೀ ಹೆಚ್.ಡಿ.ಬಸವರಾಜ್: ಸಾರ್, ಅಧಿವೇಶನದ ಕೊನೆಯ ದಿವಸವಾದರೂ ನೀವು ನಮಗೆ ಅವಕಾಶ ಕೊಡಬೇಕು. ಇವತ್ತು ಕೊಡಗಿನಲ್ಲಿ ಕಾಫಿ ತೋಟದಲ್ಲಿ ಕೆಲಸ ಮಾಡುವಂಥ ಕಾರ್ಮಿಕರಿಗೆ ಬಿಪಿಎಲ್ ಕಾರ್ಡ್ ಕೊಡಬೇಕೆನ್ನುವುದು ಬಹಳ ಹಿಂದೆಯೇ ತೀರ್ಮಾನವಾಗಿದೆ. ಆದರೆ, ಅದನ್ನು ವಿತರಣೆ ಮಾಡುವಂಥದ್ದೇ ಆಗಲಿ, ಅದರ ಜವಾಬ್ದರಿಯನ್ನು ನಿರ್ವಹಿಸುವಂಥ ಕೆಲಸವೇ ಅಗಲಿ ಕೊಡಗಿನಲ್ಲಿ ಆಗುತ್ತಿಲ್ಲ. ದಯವಿಟ್ಟು, ಮಾನ್ಯ ಮಂತ್ರಿಗಳು ಇದಕ್ಕೆ ಕಟ್ಟುನಿಟ್ಟಿನ ಒಂದು ಸೂಚನೆಯನ್ನು ಕೊಟ್ಟು, ಕೊಡಗಿನಲ್ಲಿ ಯಾರು ಕಾಫಿ ತೋಟಗಳಲ್ಲಿ ಕೃಷಿ ಕಾರ್ಮಿಕರಾಗಿ ಕೆಲಸ ಮಾಡುತ್ತಿದ್ದಾರೋ ಅವರಿಗೆ ಬಿಪಿಎಲ್ ಕಾರ್ಡ್ ಒದಗಿಸಬೇಕುನ್ನುವಂಥ ಕೆಲಸ ಮಾಡಬೇಕೆಂದು ಕೇಳುತ್ತಿದ್ದೇನೆ.

ಶ್ರೀ ಎಸ್.ಎಲ್. ಧರ್ಮೇಗೌಡ: ಕಾಫಿ ತೋಟದ ಕಾರ್ಮಿಕರೆಂದು ಹೇಳಬೇಡಿ ಸಾರ್.

ಶ್ರೀ ಹೆಚ್.ಡಿ.ಬಸವರಾಜ್: ಈಗ ನನ್ನ ಸಮಸ್ಯೆ ಹೇಳತ್ತಿದ್ದೇನೆ. ನೀವೂ ಹೇಳಿ. ಚಿಕ್ಕಮಗಳೂರಿನಲ್ಲಿ ಎಲ್ಲೆಲ್ಲಿ ಕಾಫಿ ತೋಟವಿದೆ ಅಲ್ಲಿಗೆಲ್ಲ ಕೊಡಿ ಎಂದು ಹೇಳಿ.

ಅಧ್ಯಕ್ಷರು: ಎಷ್ಟು ಕೇಳುತ್ತೀರಿ?

ಶ್ರೀ ಹೆಚ್.ಡಿ.ಬಸವರಾಜ್: ಕಾಫಿ ತೋಟವೆಂದರೆ, ಇಡೀ ಕರ್ನಾಟಕ ರಾಜ್ಯದಲ್ಲಿದೆ. ಆಯಿತು, ಒಪ್ಪಿಕೊಂಡೆ ಸಾರ್. ಎರಡನೆಯದಾಗಿ, ಕೊಡಗಿನಲ್ಲಿ ಮಳೆಗಾಲದಲ್ಲಿ ಪರಿಸ್ಥಿತಿ ಬಹಳ ಕಠಿಣವಾಗಿರುತ್ತದೆ. ಅಲ್ಲಿ ಯಾರ್ಯಾರು ರೇಷನ್ ಕಾರ್ಡ್ ಹೊಂದಿರುತ್ತಾರೆ, ಯಾರ್ಯಾರ ಹತ್ತಿರ ಗ್ಯಾಸ್ ಕನೆಕ್ಷನ್ ಇದೆ, ಅವರಿಗೆ ಸಿಮೆಎಣ್ಣೆ ಸಿಕ್ಕುವುದಿಲ್ಲ. ಆದ್ದರಿಂದ ಪರಿಸ್ಥಿತಿ ಬಹಳ ಕಠಿಣವಾಗಿ, ಅವರು ಬಹಳಷ್ಟು ದಿನ ಕತ್ತಲಲ್ಲಿಯೇ ಕಳೆಯುವಂಥ ಕೆಟ್ಟ ಪರಿಸ್ಥಿತಿಯಲಿದ್ದಾರೆ.

ಆದ್ದರಿಂದ, ಮಳೆಗಾಲದಲ್ಲಿ ಕೊಡಗಿನಲ್ಲಿರುವವರಿಗೆ ಯಾರ್ಯಾರಿಗೆ ಗ್ಯಾಸ್ ಕನೆಕ್ಷನ್‌ನ ಅನುಮತಿಯನ್ನು ಕೊಟ್ಟಿದ್ದಾರೆ. ಅವರಿಗೆ ಸೀಮೆಎಣ್ಣೆ ಕೂಡ ದೊರಕಿಸಿಕೊಡುವಂಥ ಒಂದು ಸೂಚನೆಯನ್ನು ಕೊಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಶ್ರೀ ಗೋವಿಂದ ಎಂ. ಕಾರಜೋಳ: ಬಡವರು, ಕಾರ್ಮಿಕರು ಇವತ್ತು ಕಾಫಿ ತೋಟದಲ್ಲಿಯೇ ಕೆಲಸ ಮಾಡಲಿ ಯಾವುದೇ ತೋಟದಲ್ಲಿ ಕೆಲಸ ಮಾಡಲಿ ಅಥವಾ ಬೇರೆ ಕಡೆ ಕೆಲಸ ಮಾಡಲಿ. ಬಡವರಿಗೆಲ್ಲರಿಗೂ ಕೊಡತಕ್ಕಂಥ ವ್ಯವಸ್ಥೆಯನ್ನು ಮಾಡುತ್ತೇವೆ ಮತ್ತು ಕಟ್ಟುನಿಟ್ಟಿನ ಆದೇಶವನ್ನು ಸಂಬಂಧಪಟ್ಟಂಥ ಜಿಲ್ಲಾಧಿಕಾರಿಗಳಿಗೆ ಕೂಡಲೇ ಕೊಡುತ್ತೇವೆ. ಇವತ್ತು ಅವರು ಸೀಮೆಎಣ್ಣೆ ಬಗ್ಗೆ ಪ್ರಸ್ತಾಪಿಸುತ್ತಿದ್ದಾರೆ. ಇವತ್ತು ಸೀಮೆಎಣ್ಣೆ ಹೆಚ್ಚಿಗೆ ಅಲಾಟ್‌ಮೆಂಟ್ ಬರುತ್ತಿಲ್ಲ. ಸೀಮೆಎಣ್ಣೆ ಕೊಡಬೇಕೆಂದು ನಾವು ಕೇಂದ್ರ ಸರ್ಕಾರಕ್ಕೆ ಒತ್ತಾಯ ಮಾಡಿದ್ದೇವೆ. ಎಲ್ಲೆಲ್ಲಿ ಕರೆಂಟ್ ಇರುವುದಿಲ್ಲ, ಅಂಥಲ್ಲಿ ಕೊಡಬೇಕೆಂದು ಕೇಳಿದ್ದೇವೆ. ಅದಕ್ಕಾಗಿ ಇವತ್ತು ಸ್ವಲ್ಪ ಮಟ್ಟಿಗೆ ಮಳೆಗಾಲದಲ್ಲಿ ತೊಂದರೆಯಾಗುತ್ತದೆ. ಕೊಡಗು, ಚಿಕ್ಕಮಗಳೂರು, ಹಾಸನ ಇಂಥ ಜಿಲ್ಲೆಗಳಿಗೆ, ಎಲ್ಲೆಲ್ಲಿ ಗುಡ್ಡಗಾಡು ಪ್ರದೇಶಗಳಿವೆ, ಎಲ್ಲೆಲ್ಲಿ ಕರೆಂಟ್‌ಗೆ ತೊಂದರೆ ಇದೆ, ಅಲ್ಲಿ ಕೊಡಬೇಕೆಂದು ಹೆಚ್ಚುವರಿ ಅಲಾಟ್‌ಮೆಂಟ್ ಅನ್ನು ಈಗಾಗಲೇ ಕೊಟ್ಟಿದ್ದೇವೆ. ಜಿಲ್ಲಾಧಿಕಾರಿಗಳಿಗೆ ಬಿಡುಗಡೆ ಮಾಡಿದ್ದೇವೆ. ಅಲ್ಲಿ ಜಿಲ್ಲಾಧಿಕಾರಿಗಳು ಇದನ್ನು ಹೊಂದಾಣಿಕೆ ಮಾಡಿಕೊಡಲಿಕ್ಕೆ ಸೂಚನೆಯನ್ನು ಕೊಟ್ಟಿದ್ದೇವೆ. ಇದಲ್ಲದೆ, ಇವತ್ತು ಹೇಳುತ್ತಿದ್ದಾರೆ, 70 ರೂಪಾಯಿ ಪಗಾರ ತೆಗೆದುಕೊಳ್ಳುತ್ತಾರೆಂದು ಹೇಳುತ್ತಿದ್ದಾರೆ. ಈ ಆದಾಯದ ಮಿತಿ ಬರುವುದರಿಂದ ಸ್ವಲ್ಪ ಮಟ್ಟಿಗೆ ಜಿಲ್ಲಾಧಿಕಾರಿಗಳಿಗೂ ತೊಂದರೆಯಾಗಿದೆ. ಜಿಲ್ಲಾಧಿಕಾರಿಗಳಿಗೆ liberal ಆಗಿ ಯಾರ್ಯಾರು ಕಾರ್ಮಿಕರಿದ್ದಾರೆ, ಯಾರು ಭೂಮಿ ಇಲ್ಲದವರಾಗಿದ್ದಾರೆ, ಅವರೆಲ್ಲರಿಗೂ ಕೊಡಲಿಕ್ಕೆ ವ್ಯವಸ್ಥೆ ಮಾಡುತ್ತೇವೆ.

10. ನಿಯಮ 69ರ ಮೇಲೆ ನಡೆದ ಚರ್ಚೆಗೆ ಉತ್ತರ

ವಿಷಯ:–ಜವಹರಲಾಲ್ ನೆಹರು ರಾಷ್ಟ್ರೀಯ ನಗರ ಪುನರ್ ನಿರ್ಮಾಣ ಯೋಜನೆಯಲ್ಲಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ನಡೆದಿರತಕ್ಕಂಥ ಅವ್ಯವಹಾರದ ಬಗ್ಗೆ–